# ವ್ಯಕ್ತಿಗತ ಸಮಾಜಕಾರ್ಯದ ಪರಿಚಯ

ಗಂಗಾಧರ ರೆಡ್ಡಿ ಎನ್.
ರಮೇಶ ಎಂ.ಎಚ್.

NIRUTA Publications

# ವ್ಯಕ್ತಿಗತ ಸಮಾಜಕಾರ್ಯದ ಪರಿಚಯ

ಗಂಗಾಧರ ರೆಡ್ಡಿ ಎನ್.
ರಮೇಶ ಎಂ.ಎಚ್.

ನಿರುತ
ಪಬ್ಲಿಕೇಷನ್ಸ್

**Vyakthigatha Samajakaryada Parichaya**
**(Introduction to Social Case Work)**
by Gangadhara Reddy N., Ramesha M.H.

Publisher : Niruta Publications, Bengaluru
ISBN : 978-93-84262-39-6
First Edition : 2017
Size : 1/8 Demy
Price : Rs. 175-00
Copies : 1000
Paper : N.S. Maplitho 70 GSM
Pages : 174
Rights : Author
ಪ್ರಥಮ ಮುದ್ರಣ : ೨೦೧೭
ಆಕಾರ : ೧/೮ ಡೆಮಿ
ಬೆಲೆ : ರೂ. ೧೭೫-೦೦
ಪ್ರತಿಗಳು : ೧೦೦೦
ಕಾಗದ : ಎನ್.ಎಸ್. ಮ್ಯಾಪ್ಲಿತೊ ೭೦ ಜಿ.ಎಸ್.ಎಂ.
ಪುಟಗಳು : ೧೭೪
ಹಕ್ಕುಗಳು : ಲೇಖಕರವು
ಮುಖಪುಟ ವಿನ್ಯಾಸ : ಶಿವಕುಮಾರ್, ನಿರಾತಂಕ
ಪ್ರಕಾಶಕರು : **ನಿರುತ ಪಬ್ಲಿಕೇಷನ್ಸ್,** ನಂ. ೩೨೬, ೧ನೇ ಮಹಡಿ, ಸಿಂಡಿಕೇಟ್ ಬ್ಯಾಂಕ್ ಎದುರು, ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ, ಬೆಂಗಳೂರು-೫೬೦೦೫೬. ದೂ : ೦೮೦-೨೩೨೧೩೭೧೦, ಮೊ: ೯೯೮೦೦೬೬೮೯೦
Email: ramesha.mh@gmail.com, nirutapublications@gmail.com
www.socialworkfootprints.org, www.samajakarya.org

ಮುದ್ರಣ : **ನಿರುತ ಪಬ್ಲಿಕೇಷನ್ಸ್,** ನಂ. ೩೨೬, ೧ನೇ ಮಹಡಿ, ಸಿಂಡಿಕೇಟ್ ಬ್ಯಾಂಕ್ ಎದುರು, ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ, ಬೆಂಗಳೂರು-೫೬೦೦೫೬. ದೂ : ೦೮೦-೨೩೨೧೩೭೧೦, ಮೊ: ೯೯೮೦೦೬೬೮೯೦
Email: ramesha.mh@gmail.com, nirutapublications@gmail.com
www.socialworkfootprints.org, www.samajakarya.org

## ಅರ್ಪಣೆ

**XEROX / ನೆರಳಚ್ಚು ಮಾಡದೆ ಮೂಲ ಪ್ರತಿಯನ್ನು**
**ಖರೀದಿಸಿ ಓದುವ ಮೂಲಕ ಕನ್ನಡ ಭಾಷೆಯಲ್ಲಿ**
**ಸಮಾಜಕಾರ್ಯ ಸಾಹಿತ್ಯದ ವಿಫುಲ ಬೆಳವಣಿಗೆಗೆ**
**ಕಾರಣೀಭೂತರಾದ ಎಲ್ಲ ಸಹೃದಯ**
**ಕನ್ನಡ ಪ್ರೇಮಿ ಓದುಗರಿಗೆ**

## ಪುಟ ತಿರುಗಿಸುವ ಮುನ್ನ...

ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ವೃತ್ತಿಯಾಗಿ ಪರಿಗಣಿಸಲ್ಪಟ್ಟ ಸಮಾಜಕಾರ್ಯ, ಭಾರತಕ್ಕೆ ಪ್ರಶಿಕ್ಷಣ ಮಾದರಿಯಲ್ಲಿ ಲಗ್ಗೆಯಿಟ್ಟಿದ್ದು 1936ರಲ್ಲಿ ಮತ್ತು ಕರ್ನಾಟಕಕ್ಕೆ 1960ರ ದಶಕದಲ್ಲಿ. ಸಮಾಜದ ಬಹುಪಾಲು ಸಮಸ್ಯೆಗಳೊಂದಿಗೆ ವ್ಯವಹರಿಸುವ ವಿಶಿಷ್ಟ ವಿಷಯವಾದ ಸಮಾಜಕಾರ್ಯ ಒಂದು ಸ್ವತಂತ್ರ ವೃತ್ತಿಯಲ್ಲ. ಇತರ ಸಮಾಜವಿಜ್ಞಾನ – ವಿಜ್ಞಾನ – ಶಾಸ್ತ್ರ ಹಾಗೂ ವೃತ್ತಿಗಳ ಸಹಯೋಗ ಮತ್ತು ಸಹಕಾರವಿಲ್ಲದೆ ತನ್ನ ಗುರಿ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಿಲ್ಲದ ಕಾರಣ ಸಮಾಜಕಾರ್ಯ ಒಂದು ಅಂತರ್–ಶಿಸ್ತೀಯ, ಅಂತರ್–ವೃತ್ತೀಯ ಕ್ರಿಯೆಯಾಗಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಲಿದೆ. ಪಾಶ್ಚಾತ್ಯ ರಾಷ್ಟ್ರಗಳಿಂದ ಆಮದು ಮಾಡಿಕೊಂಡ ಸಮಾಜಕಾರ್ಯ ಪ್ರಶಿಕ್ಷಣವನ್ನು ಯಥಾವತ್ತಾಗಿ ಭಾರತದಲ್ಲಿ ಅಳವಡಿಸಿಕೊಳ್ಳಲಾಗಿ, ಇಂದಿಗೂ ಅದೇ ರೀತಿಯಲ್ಲಿ ಬೋಧಿಸಲ್ಪಡುತ್ತಿದೆ. ಒಂದು ವೇಳೆ ಅಂದು ಆಮದು ಮಾಡಿಕೊಂಡ ಪ್ರಶಿಕ್ಷಣದ ಮಾದರಿಯನ್ನು ಭಾರತದ ಸನ್ನಿವೇಶಕ್ಕೆ ಅನುಗುಣವಾಗಿ ಬದಲಾಯಿಸಿ ಬೋಧಿಸಿದ್ದಿದ್ದರೆ, ಬಹುಶಃ ಇಂದು ಸಮಾಜಕಾರ್ಯ ವೃತ್ತಿ ಮತ್ತಷ್ಟು ವೇಗವಾಗಿ ಬೆಳವಣಿಗೆ ಹೊಂದಿರುತ್ತಿತ್ತು. ಜೊತೆಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರಚನೆಯಾದ ಸಾಹಿತ್ಯದ ಅವಲಂಬನೆ ಕಡಿಮೆಯಾಗಿರುತ್ತಿತ್ತು ಮತ್ತು ಭಾರತ ದೇಶದ ಸ್ಥಳೀಯ ಭಾಷೆಗಳಲ್ಲಿ ಸಮಾಜಕಾರ್ಯಕ್ಕೆ ಸಂಬಂಧಿಸಿದ ಸಾಹಿತ್ಯ ಸೃಷ್ಟಿಯಾಗುತ್ತಿತ್ತು. ಆದರೆ ಪ್ರಶಿಕ್ಷಣದ ಜೊತೆಗೆ ಅಲ್ಲಿನ ಪಠ್ಯಕ್ರಮ ಹಾಗೂ ಮಾದರಿಯ ಯಥಾವತ್ತು ಅನುಕರಣೆ ಸ್ಥಳೀಯ ಭಾಷೆಗಳಲ್ಲಿ ಸಮಾಜಕಾರ್ಯ ಸಾಹಿತ್ಯದ ಬೆಳವಣಿಗೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತು.

ಸಮಾಜಕಾರ್ಯ ವೃತ್ತಿಯ ಕಾರ್ಯಕ್ಷೇತ್ರ ದಿನಕಳೆದಂತೆ ವಿಶಾಲವಾಯಿತು ಅಂತೆಯೇ ಅದನ್ನು ಒಂದು ವಿಷಯವನ್ನಾಗಿ ಅಭ್ಯಸಿಸುವವರ ಸಂಖ್ಯೆ

ಅಧಿಕವಾಗತೊಡಗಿತು. ಇದರ ಪರಿಣಾಮ ದೇಶದ ಬಹುಪಾಲು ವಿಶ್ವವಿದ್ಯಾಲಯಗಳಲ್ಲಿ ಇತರೆ ಸಮಾಜ ವಿಜ್ಞಾನಗಳಂತೆ ಸಮಾಜಕಾರ್ಯವೂ ಸಹ ಒಂದು ಪ್ರಮುಖ ವಿಷಯವಾಗಿ ಪ್ರತ್ಯೇಕ ವಿಭಾಗದಲ್ಲಿ ಬೋಧಿಸಲ್ಪಡಲಾರಂಭಿಸಿತು. ಉನ್ನತ ಶಿಕ್ಷಣಕ್ಕಾಗಿ ವಿಶ್ವವಿದ್ಯಾಲಯಗಳಿಗೆ ಲಗ್ಗೆ ಇಡುವ ವಿದ್ಯಾರ್ಥಿಗಳ ಸಂಖ್ಯೆ ಏರಿದಂತೆ, ಸ್ನಾತಕೋತ್ತರ ಪದವಿ ಹಂತದಲ್ಲಿ ಸಮಾಜಕಾರ್ಯವನ್ನು ಒಂದು ವಿಷಯವನ್ನಾಗಿ ಅಭ್ಯಸಿಸುವವರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಯಿತು. ಹೀಗೆ ಸ್ನಾತಕೋತ್ತರ ಪದವಿಗೆ ದಾಖಲಾದ ಬಹುಪಾಲು ವಿದ್ಯಾರ್ಥಿಗಳು ಗ್ರಾಮೀಣ ಹಿನ್ನೆಲೆಯನ್ನು ಹೊಂದಿದವರೆಂಬುದು ಗಮನಾರ್ಹ. ಮೂಲತಃ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜನ್ಮತಳೆದ ಸಮಾಜಕಾರ್ಯದ ಮೂಲ ಪರಿಕಲ್ಪನೆಗಳು ಆಂಗ್ಲ ಭಾಷೆಯಲ್ಲಿದ್ದು, ಅವುಗಳನ್ನು ಅರ್ಥೈಸಿಕೊಂಡು ಸಮರ್ಪಕವಾಗಿ ಆಚರಣೆಗೆ ತರುವುದು ಪದವಿಗೆ ದಾಖಲಾದ ಗ್ರಾಮೀಣ ಹಾಗೂ ಮಾತೃಭಾಷಾ ಶಿಕ್ಷಣ ಮಾಧ್ಯಮ ಹಿನ್ನೆಲೆಯನ್ನು ಹೊಂದಿದವರಿಗೆ ಅಕ್ಷರಶಃ ಕಷ್ಟದ ಕೆಲಸವಾಯಿತು. ಇದನ್ನು ಅರಿತ ಕೆಲ ವಿಷಯತಜ್ಞರು ಭಾರತದಲ್ಲಿ ಸಮಾಜಕಾರ್ಯ ಪ್ರಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಸಮಾಜಕಾರ್ಯದ ಮೂಲಪರಿಕಲ್ಪನೆಗಳನ್ನು ಸಮಗ್ರವಾಗಿ ಅರ್ಥೈಸುವ ದೃಷ್ಟಿಯಿಂದ ಸ್ಥಳೀಯ ಭಾಷೆಗಳಲ್ಲಿ ಸಮಾಜಕಾರ್ಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ರಚಿಸಲು ಪ್ರಯತ್ನಿಸಿದರು. ಈ ಪ್ರಯತ್ನ ಪ್ರೊ. ಎಚ್. ಎಂ. ಮರುಳಸಿದ್ದಯ್ಯರವರಿಂದ ಕನ್ನಡ ಭಾಷೆಯಲ್ಲಿ ಆರಂಭವಾಯಿತು. ಡಾ. ರಮೇಶ್ ಎಂ. ಸೋನಕಾಂಬಳೆಯವರು ಕನ್ನಡ ಭಾಷೆಯಲ್ಲಿ ಸಮಾಜಕಾರ್ಯದ ಸಾಹಿತ್ಯ ಕೃಷಿಗೆ ಆಸಕ್ತಿ ತೋರಿಸಿ ಸಮಾಜಕಾರ್ಯ ವೃತ್ತಿ ಎಂಬ ಪುಸ್ತಕವನ್ನು ಹೊರತಂದಿರುವುದನ್ನು ಹೊರತುಪಡಿಸಿದರೆ ಬೇರೆ ಯಾರೂ ಇಂತಹ ಅಧಿಕೃತ ಪ್ರಯತ್ನಗಳನ್ನು ಮಾಡಿಲ್ಲವೆಂದರೆ ತಪ್ಪಾಗದು.

ಯಾವುದೇ ಹೊಸ ವಿಚಾರ, ವಿಷಯ, ಪರಿಕಲ್ಪನೆಯನ್ನು ಸರಳವಾಗಿ, ಸಮಗ್ರವಾಗಿ ಹಾಗೂ ಆಳವಾಗಿ ಅರ್ಥೈಸಿಕೊಳ್ಳಲು ಮಾತೃಭಾಷೆಯೇ ಸೂಕ್ತ ಎಂಬುದು ಬಹುಪಾಲು ಶಿಕ್ಷಣ ತಜ್ಞರ ವಾದವಾಗಿದೆ. ಆದರೆ ಸಮಾಜಕಾರ್ಯ ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯ ಭಾರತದ ಸ್ಥಳೀಯ ಭಾಷೆಗಳಲ್ಲಿ ರಚನೆಯಾದ

ಪ್ರಮಾಣ ತೀರಾ ವಿರಳ. ಈ ಹಿಂದೆ ಸ್ನಾತಕೋತ್ತರ, ಎಂ.ಫಿಲ್ ಹಾಗೂ ಪಿ.ಎಚ್‌ಡಿಗೆ ಮಾತ್ರ ಸಿಮಿತವಾಗಿದ್ದ ಸಮಾಜಕಾರ್ಯ ಪ್ರಶಿಕ್ಷಣ ಇಂದು ಪದವಿ ತರಗತಿಗಳಿಗೂ ವಿಸ್ತರಿಸಿದೆ. ಇದಕ್ಕೆ ಪೂರಕವಾಗಿ ಕರ್ನಾಟಕದಲ್ಲಿ ಬಿ.ಎಸ್.ಡಬ್ಲ್ಯೂ ಪದವಿಯನ್ನು ಬೋಧಿಸಲ್ಪಡುತ್ತಿರುವ ಎಲ್ಲ ಸರ್ಕಾರಿ ಕಾಲೇಜುಗಳಿಗೆ ಖಾಯಂ ಪ್ರಾಧ್ಯಾಪಕರನ್ನು ನೇಮಿಸಲಾಗಿದೆ. ಆದರೆ ಬಿ.ಎಸ್.ಡಬ್ಲ್ಯೂ ಪದವಿಗೆ ದಾಖಲಾದ ಪ್ರಶಿಕ್ಷಣಾರ್ಥಿಗಳಿಗೆ ಬೋಧಿಸಲು ಯಾವುದೇ ಅಧಿಕೃತ ಪಠ್ಯಪುಸ್ತಕಗಳು ಕನ್ನಡ ಭಾಷೆಯಲ್ಲಿ ಇಲ್ಲದಿರುವುದು ಬಹುದೊಡ್ಡ ಸಮಸ್ಯೆಯಾಗಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ಭಾಷೆಗಳಲ್ಲಿ ನಡೆಯಬೇಕಿದ್ದ ಸಮಾಜಕಾರ್ಯ ಸಾಹಿತ್ಯದ ಕೃಷಿ ಹಿಂದೆಂದಿಗಿಂತಲೂ ಇಂದು ಅನಿವಾರ್ಯವಾಗಿ ಮತ್ತು ಅಧಿಕೃತವಾಗಿ ಜರುಗಬೇಕಿದೆ. ಈ ವಿಚಾರವನ್ನು ಸೂಕ್ಷ್ಮವಾಗಿ ಪರಿಗಣಿಸಿದ ಕೆಲ ವಿಚಾರವಂತ ವೃತ್ತಿಪರ ಸಮಾಜಕಾರ್ಯಕರ್ತರು ಹಾಗೂ ಸಮಾಜಕಾರ್ಯ ಶಿಕ್ಷಣ ಕ್ಷೇತ್ರದಲ್ಲಿ ಸೇವಾನಿರತರಾದವರು ನಿರುತ ಪಬ್ಲಿಕೇಷನ್ಸ್ ಸಂಸ್ಥೆಯ ಕಛೇರಿಯಲ್ಲಿ ಸಭೆಸೇರಿ ಈ ವಿಚಾರವನ್ನು ಗಂಭೀರವಾಗಿ ಚರ್ಚಿಸಿ ಸಮಾಜಕಾರ್ಯ ಸಾಹಿತ್ಯವನ್ನು ರಚಿಸುವ ಯೋಜನೆಯನ್ನು ಸಿದ್ಧಪಡಿಸಿದರು. ಈ ಯೋಜನೆಯನ್ನು ಅನುಷ್ಠಾನಗೊಳಿಸಿದ ಫಲವಾಗಿ ರಚನೆಯಾದ ಪುಸ್ತಕ "ವ್ಯಕ್ತಿಗತ ಸಮಾಜಕಾರ್ಯದ ಪರಿಚಯ".

ವ್ಯಕ್ತಿಗತ ಸಮಾಜಕಾರ್ಯದ ಮೂಲಪರಿಕಲ್ಪನೆಗಳನ್ನು ವಿದ್ಯಾರ್ಥಿಗಳಿಗೆ ಪ್ರಮುಖವಾಗಿ ಗ್ರಾಮೀಣ ಹಾಗೂ ಕನ್ನಡ ಭಾಷಾ ಮಾಧ್ಯಮದ ಹಿನ್ನೆಲೆಯನ್ನು ಹೊಂದಿರುವವರಿಗೆ ಸರಳವಾಗಿ ಮತ್ತು ಸಮಗ್ರವಾಗಿ ಅರ್ಥೈಸುವುದೇ ಈ ಪುಸ್ತಕ ರಚನೆಯ ಮೂಲ ಉದ್ದೇಶವಾಗಿದೆ. ಆದ ಕಾರಣ ಸದರಿ ಪುಸ್ತಕವನ್ನು ಸಾಧ್ಯವಾದಷ್ಟು ಸರಳ ಭಾಷೆಯಲ್ಲಿ, ಸಮಗ್ರವಾಗಿ, ಉದಾಹರಣೆಗಳ ಮೂಲಕ ಅರ್ಥೈಸಲು ಪ್ರಯತ್ನಿಸಿದ್ದೇವೆ. ವ್ಯಕ್ತಿಗತ ಸಮಾಜಕಾರ್ಯದ ಮೂಲ ಪರಿಕಲ್ಪನೆಗಳು, ತತ್ವಗಳು, ಘಟಕಗಳು, ಪಕ್ರಿಯೆ, ಮಾರ್ಗದೃಷ್ಟಿಗಳು, ಸಾಧನ ಮತ್ತು ತಂತ್ರಗಳ ಜೊತೆಗೆ ಆಚರಿಸಲ್ಪಡುವ ವಿವಿಧ ಕ್ಷೇತ್ರಗಳ ಬಗೆಗಿನ ಸಂಕ್ಷಿಪ್ತ ಮಾಹಿತಿಯನ್ನು ಒದಗಿಸಲು ಪ್ರಯತ್ನಿಸಿದ್ದು, ಮೂಲ ಅರ್ಥಕ್ಕೆ ಧಕ್ಕೆಯಾಗದ ಹಾಗೆ ಎಚ್ಚರ ವಹಿಸಲಾಗಿದೆಯೆಂದು ತಿಳಿಯಬಯಸುತ್ತೇವೆ. ಅವಶ್ಯಕತೆ ಮತ್ತು

ಅನಿವಾರ್ಯತೆಗಳನ್ನು ಮನಗಂಡು ವಿಷಯದ ಕೆಲ ಪ್ರಮುಖ ಅಂಶಗಳನ್ನು/ ವಿಚಾರಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲೂ ನೀಡಿದ್ದು, ಇದು ವಿಚಾರ–ಗ್ರಹಿಕೆಯಲ್ಲಿ ಓದುಗರಿಗೆ ನೆರವಾಗುವುದೆಂದು ಭಾವಿಸುತ್ತೇವೆ. ಪಠ್ಯಪುಸ್ತಕ ರೂಪದಲ್ಲಿ ರಚನೆಯಾದ ಈ ಪುಸ್ತಕ ಕರ್ನಾಟಕ ರಾಜ್ಯದ ಬಹುಪಾಲು ವಿಶ್ವವಿದ್ಯಾಲಯಗಳ ಪಠ್ಯಕ್ರಮ, ಮಾದರಿ / ನಿರೀಕ್ಷಿತ ಪ್ರಶ್ನೆಗಳನ್ನು ಒಳಗೊಂಡಿದ್ದು, ಪದವಿ ಮತ್ತು ಸ್ನಾತಕೋತ್ತರ ಪ್ರಶಿಕ್ಷಣಾರ್ಥಿಗಳಿಗೆ, ಅಧ್ಯಾಪಕರಿಗೆ, ವೃತ್ತಿಪರ ಸಮಾಜಕಾರ್ಯಕರ್ತರಿಗೆ ಮತ್ತು ಸದರಿ ವಿಷಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುತ್ತಿರುವವರಿಗೆ ಒಂದು ಉಪಯುಕ್ತ ಹಾಗು ಮಾರ್ಗದರ್ಶಿ ಸಾಧನವಾಗುತ್ತದೆ ಎಂಬ ಆಶಾಭಾವನೆಯನ್ನು ಹೊಂದಿದ್ದೇವೆ.

ಆರಂಭದಲ್ಲಿ ನಾನು (ಗಂಗಾಧರ ರೆಡ್ಡಿ ಎನ್.) ಬರೆದ ಕೆಲವು ಬರಹಗಳನ್ನು ತಿದ್ದಿ, ಕನ್ನಡ ಭಾಷೆಯಲ್ಲಿ ಬರವಣಿಗೆಯನ್ನು ಮುಂದುವರೆಸಲು ಹುರಿದುಂಬಿಸಿ ಪ್ರೋತ್ಸಾಹಿಸಿದ ಕೀರ್ತಿ ಪ್ರೊ. ಎಚ್.ಎಂ. ಮರುಳಸಿದ್ಧಯ್ಯನವರಿಗೆ ಮತ್ತು ಶ್ರೀಯುತ ಪ್ರಕಾಶ್ ಕಾಮತ್‌ರವರಿಗೆ ಸಲ್ಲುತ್ತದೆ. ಇವರಿಗೆ ನಾನು ಕೃತಜ್ಞನಾಗಿರುತ್ತೇನೆ. ಸಮಾಜಕಾರ್ಯಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಕನ್ನಡ ಭಾಷೆಯಲ್ಲಿ ರಚಿಸಬೇಕೆಂಬ ನನ್ನ ಬಹುದಿನಗಳ ಕನಸಿಗೆ ನೀರೆರೆದು ಪೋಷಿಸಿದ ಸರ್ವರಿಗೂ ಅಭಿನಂದನೆಗಳು. ವ್ಯಕ್ತಿಗತ ಸಮಾಜಕಾರ್ಯದ ಮೂಲ ಪರಿಕಲ್ಪನೆಗಳಿಗೆ ಚ್ಯುತಿ ಬಾರದ ಹಾಗೆ ವಿಷಯ ದೋಷಗಳನ್ನು ಕಾಲ–ಕಾಲಕ್ಕೆ ಪರಿಶೀಲಿಸಿ ಸೂಕ್ತ ಸಲಹೆ–ಸೂಚನೆಗಳನ್ನು ನೀಡುತ್ತಿದ್ದ ಗುರುಗಳಾದ ಶ್ರೀಮತಿ ಶಶಿಕಿರಣ್ ಶೆಟ್ಟಿರವರಿಗೆ ಹಾಗೂ ಸಹೋದ್ಯೋಗಿ ಮಿತ್ರರಿಗೆ, ಪುಸ್ತಕದಲ್ಲಿ ಬಳಸಿರುವ ಭಾಷಾ ಶೈಲಿಯನ್ನು ಪರಿಶೀಲಿಸಿ, ಸರಳ ಪದಗಳನ್ನು ಉಪಯೋಗಿಸಲು ಸಲಹೆ ನೀಡುವುದರ ಜೊತೆಗೆ ಅಕ್ಷರ ಮತ್ತು ಪದ ದೋಷಗಳನ್ನು ಹೆಕ್ಕಿ ತೆಗೆದ ವಿದ್ಯಾರ್ಥಿ ವೃಂದಕ್ಕೆ ಪ್ರಮುಖವಾಗಿ ಶ್ರೀಮತಿ ಸುನಿತ ಬಿ.ಸಿ., ಕು॥ ಮೀನಾ ಜಿ., ಚಿ॥ ಸುಧಾಕರ ಸಿ.ಎನ್. ಕು॥ ದಿವ್ಯಾಶ್ರೀ, ಕು॥ ಶೈಲಾ ಸಿ.ಜೆ ಮತ್ತು ಕು॥ ದಿವ್ಯಾ ಎಂ. ರವರಿಗೆ ಹಾಗೂ ಮಿತ್ರರಾದ ಶ್ರೀಯುತ ಮಹಾದೇವ ನಾಯಕ್ ರವರಿಗೆ ಪ್ರೀತಿಪೂರ್ವಕ ಅಭಿನಂದನೆಗಳು.

ಮಾದರಿ ಪ್ರಶ್ನೆಗಳನ್ನು ರಚಿಸಿಕೊಡುವುದರ ಮೂಲಕ ಪುಸ್ತಕದ ಗುಣಮಟ್ಟವನ್ನು ಇಮ್ಮಡಿಗೊಳಿಸಿದ ಪ್ರೊ. ಕೋದಂಡರಾಮ, ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ ಇವರಿಗೆ ಕೃತಜ್ಞನಾಗಿರುತ್ತೇವೆ. ಅರ್ಥಗರ್ಭಿತ ಮುನ್ನುಡಿಯನ್ನು ಬರೆದುಕೊಟ್ಟು ಲೇಖಕರಿಗೆ ಶುಭಹರಿಸಿದ ಡಾ. ರಮೇಶ್ ಬಿ., ಪ್ರಾಧ್ಯಾಪಕರು, ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ನಾವು ಆಭಾರಿಯಾಗಿರುತ್ತೇವೆ. ಅಂದವಾದ ಪದಜೋಡಣೆ ಮತ್ತು ಸುಂದರವಾದ ಮುಖಪುಟ ವಿನ್ಯಾಸ ಮಾಡಿದ ಶ್ರೀಯುತ ಶಿವಕುಮಾರ್ ರವರಿಗೆ ಅಭಿನಂದನೆಗಳು.

ಅಂತಿಮವಾಗಿ, ಸಮಾಜಕಾರ್ಯ ಪರಿಕಲ್ಪನೆಗಳನ್ನು ಇಂಗ್ಲೀಷಿನಲ್ಲಿ ಅರ್ಥಮಾಡಿಕೊಳ್ಳುವ ಸಂದರ್ಭದಲ್ಲಿ ಎದುರಾಗುತ್ತಿದ್ದ ಸಮಸ್ಯೆಗಳನ್ನು ಹಂಚಿಕೊಂಡ ಆತ್ಮೀಯ ವಿದ್ಯಾರ್ಥಿ ಮಿತ್ರರು ಈ ಪುಸ್ತಕ ರಚನೆಗೆ ಮೂಲ ಪ್ರೇರಣೆ. ಇವರೆಲ್ಲರನ್ನೂ ನಾವು ಈ ಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇವೆ ಹಾಗೂ ಈ ಪುಸ್ತಕ ಅವರೆಲ್ಲರಿಗೂ ಪ್ರಿಯವಾಗುವುದೆಂದು ಆಶಿಸುತ್ತೇವೆ. ಪುಸ್ತಕದಲ್ಲಿ ದಾಖಲಾದ ಯಾವುದೇ ಉದಾಹರಣೆ/ ಪದಬಳಕೆ/ ವಿಷಯ ಇತ್ಯಾದಿಗಳು ಅಸಮಂಜಸ ಅಥವಾ ಅಪ್ರಸ್ತುತ ಎಂದೆನಿಸಿದರೆ ತಕ್ಷಣ ಪ್ರಕಾಶಕರ ಗಮನಕ್ಕೆ ತರಲು ಕೋರಿದೆ ಹಾಗೂ ಕಂಡುಬರುವ ಯಾವುದೇ ತಪ್ಪು / ದೋಷಕ್ಕೆ ಸಂಬಂಧಿಸಿದ ಹಿಮ್ಮಾಹಿತಿ / ಸಲಹೆ / ಸೂಚನೆಗಳಿಗೆ ಸದಾ ಸ್ವಾಗತ.

ಸ್ಥಳ: ಬೆಂಗಳೂರು
ದಿನಾಂಕ: 22–05–2017

**ಗಂಗಾಧರ ರೆಡ್ಡಿ ಎನ್**
**ರಮೇಶ ಎಂ.ಎಚ್.**

# ಮುನ್ನುಡಿ

ಭಾರತದಲ್ಲಿ ವೃತ್ತಿ ಸಮಾಜಕಾರ್ಯ ಶಿಕ್ಷಣ ಆರಂಭವಾದಾಗಿನಿಂದಲೂ ದೇಶೀಯ ಭಾಷೆಗಳಲ್ಲಿ ಸಮಾಜಕಾರ್ಯ ಸಾಹಿತ್ಯದ ಲಭ್ಯತೆಯ ಕೊರತೆ ಸಮಾಜಕಾರ್ಯ ಶಿಕ್ಷಣಕ್ಕೆ ಮತ್ತು ಆಚರಣೆಗೆ ಅತಿ ದೊಡ್ಡ ಸವಾಲಾಗಿ ಪರಿಣಮಿಸಿದೆ. ಭಾರತದಲ್ಲಿನ ವೃತ್ತಿ ಸಮಾಜಕಾರ್ಯ ಶಿಕ್ಷಣವು ಅಮೇರಿಕ ಸಂಯುಕ್ತ ಸಂಸ್ಥಾನದ ಮಾದರಿಯನ್ನು ಆಮದು ಮಾಡಿಕೊಂಡು ಅಳವಡಿಸಿಕೊಂಡಿದ್ದಾಗಿದ್ದು, ಭಾರತೀಯತೆಯ ಸ್ವರೂಪವನ್ನೊಳಗೊಂಡ ವೃತ್ತಿ ಸಮಾಜಕಾರ್ಯದ ಜ್ಞಾನದ ರೂಪವು ಇನ್ನು ಜನ್ಮತಳೆಯಬೇಕಿದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಕನ್ನಡ ಭಾಷೆಯಲ್ಲಿ ಸಮಾಜಕಾರ್ಯ ಸಾಹಿತ್ಯ ಸೃಷ್ಟಿಸಿದ ಮೊದಲಿಗರಾದ ಪ್ರೊ.ಎಚ್.ಎಂ ಮರುಳಸಿದ್ದಯ್ಯರವರ ಪರಂಪರೆಯನ್ನು ಮುಂದುವರೆಸುವಲ್ಲಿ ನಾವುಗಳು ಸಫಲರಾಗಲಿಲ್ಲ.

ವ್ಯಕ್ತಿಗತ ಸಮಾಜಕಾರ್ಯವು ಸಮಾಜಕಾರ್ಯದ ವಿಧಾನಗಳಲ್ಲಿಯೇ ಮೊದಲು ಆಚರಣೆಗೊಂಡ ಪ್ರಾಥಮಿಕ ವಿಧಾನವಾಗಿದ್ದು, 1922ರಲ್ಲಿ **'ಮೇರಿ ರಿಚ್‌ಮಂಡ್'** ಬರೆದ ಮೊದಲ ಪುಸ್ತಕ **'What is Social Work'**? ವ್ಯಕ್ತಿಗತ ಸಮಾಜಕಾರ್ಯದ ಮೊದಲ ಪುಸ್ತಕ. ಮೇರಿ ರಿಚ್‌ಮಂಡ್‌ರವರ ಈ ಪುಸ್ತಕ ವ್ಯಕ್ತಿಗತ ಸಮಾಜಕಾರ್ಯ ಕೇಂದ್ರಿತ ಮಾತ್ರವಾಗಿರದೇ ಸಮಾಜಕಾರ್ಯ ಜ್ಞಾನದ ಸಮಗ್ರ ಆಚರಣೆಯ ಆಶಯವನ್ನು ಒಳಗೊಂಡಿದೆ. ಹಾಗಾಗಿ ಅಲ್ಲಿಂದ ಆರಂಭಗೊಂಡ ಸಮಾಜಕಾರ್ಯ ಜ್ಞಾನವನ್ನು ವ್ಯಕ್ತಿಗತ ಸಮಾಜಕಾರ್ಯ ವಿಧಾನದ ಮೂಲಕ ಅರ್ಥೈಸಿಕೊಳ್ಳುವ ಪ್ರಕ್ರಿಯೆಯೂ ಇಂದಿಗೂ ಮುಂದುವರೆದಿದೆ.

ನಿರುತ ಪಬ್ಲಿಕೇಷನ್ಸ್‌ರವರು ಪ್ರಕಟಿಸುತ್ತಿರುವ ಈ ಪುಸ್ತಕವು ಸಮಯೋಚಿತವಾಗಿದ್ದು ಪದವಿ ಮಟ್ಟದಲ್ಲಿ ಸಮಾಜಕಾರ್ಯ ಶಿಕ್ಷಣವನ್ನು ಬಲಪಡಿಸಬೇಕೆಂಬ ಬಹುದಿನದ ಬೇಡಿಕೆಯನ್ನು ಕರ್ನಾಟಕ ಸರ್ಕಾರ

ಮಾನ್ಯಮಾಡಿ ಪದವಿ ಕಾಲೇಜುಗಳಲ್ಲಿರುವ ಬಿ.ಎಸ್.ಡಬ್ಲ್ಯೂ ವಿಭಾಗಕ್ಕೆ ಖಾಯಂ ಅಧ್ಯಾಪಕರನ್ನು ನೇಮಕ ಮಾಡಲಾಗಿದ್ದು, ಸಮಾಜಕಾರ್ಯ ಶಿಕ್ಷಣದ ಬೆಳವಣಿಗೆಯ ದಾರಿಯಲ್ಲಿ ಇದೊಂದು ಮೈಲಿಗಲ್ಲಾಗಲಿದೆ. ಹಾಗೆಯೇ ಪದವಿ ಮಟ್ಟದಲ್ಲಿನ ಸಮಾಜಕಾರ್ಯ ಶಿಕ್ಷಣದ ಬಹುದೊಡ್ಡ ತೊಡಕಾಗಿದ್ದ ಕನ್ನಡದಲ್ಲಿನ ಪುಸ್ತಕಗಳ ಕೊರತೆಯನ್ನು ನೀಗಿಸುವ ಉದ್ದೇಶದಿಂದ ನಿರುತ ಪಬ್ಲಿಕೇಷನ್ಸ್ ಕಛೇರಿಯಲ್ಲಿ, ಮೈಸೂರು ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗದ ಮುಖ್ಯಸ್ಥರಾದ ಡಾ. ಎಚ್. ಶಿವಪ್ಪರವರ ನೇತೃತ್ವದಲ್ಲಿ ನಡೆದ ವೃತ್ತಿಪರ ಸಮಾಜಕಾರ್ಯಕರ್ತರ ಸಭೆಯಲ್ಲಿ ತೆಗೆದುಕೊಂಡ ಪ್ರಮುಖ ನಿರ್ಣಯಗಳ ಅನುಷ್ಠಾನದ ಭಾಗವಾಗಿ ಈ ಪುಸ್ತಕ ಹೊರಬರುತ್ತಿರುವುದು ಶ್ಲಾಘನೀಯ.

ಈ ಪುಸ್ತಕದ ಕರ್ತೃಗಳಾದ ಶ್ರೀಯುತರುಗಳಾದ ಗಂಗಾಧರ ರೆಡ್ಡಿ ಎನ್. ಮತ್ತು ಎಂ. ಎಚ್. ರಮೇಶ್‌ರವರು ಯುವಮನಸ್ಸಿನ ದೂರದೃಷ್ಟಿಯ ವೃತ್ತಿಪರ ಔನತ್ಯಕ್ಕೆ ತುಡಿಯುತ್ತಿರುವ ಮತ್ತು ಕ್ರಿಯಾಶೀಲ ಪ್ರಯೋಗಗಳಿಗೆ ತಮ್ಮನ್ನು ಸದಾ ಒಡ್ಡಿಕೊಳ್ಳುವ ವೃತ್ತಿಪರರಾಗಿದ್ದು, ಅವರ ಈ ಪ್ರಯತ್ನ ಸಮಾಜಕಾರ್ಯ ಶಿಕ್ಷಣ ಮತ್ತು ಆಚರಣೆಗೆ ಅತ್ಯಮೂಲ್ಯ ಕೊಡುಗೆಯಾಗಲಿದೆ. ಈ ಪುಸ್ತಕದಲ್ಲಿ ನಿರೂಪಿಸಲಾಗಿರುವ ವಸ್ತು ವಿಷಯಗಳು ವೈಜ್ಞಾನಿಕ ಸಮಾಜಕಾರ್ಯದ ಎಲ್ಲಾ ರೂಪಗಳನ್ನು ಒಳಗೊಂಡಿದ್ದು, ಸ್ನಾತಕ ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಸಮಾಜಕಾರ್ಯವನ್ನು ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಿಗೆ, ಅಧ್ಯಾಪಕರುಗಳಿಗೆ ಮತ್ತು ವ್ಯಕ್ತಿಗತ ಸಮಾಜಕಾರ್ಯ ಆಚರಣೆ ಮಾಡುತ್ತಿರುವ ವೃತ್ತಿಪರರಿಗೆ ಪ್ರಮುಖವಾದ ಸಾಧನವಾಗುತ್ತದೆ. ಈ ಮೂಲಕ ದೇಶಿ ಭಾಷೆಗಳಲ್ಲಿನ ಸಮಾಜಕಾರ್ಯ ಸಾಹಿತ್ಯದ ಕೊರತೆಯನ್ನು ಈ ಇಬ್ಬರು ಲೇಖಕರು ತುಂಬಿದ್ದಾರೆ ಎಂದು ಪರಿಭಾವಿಸಬಹುದು.

ಯಾವುದೇ ವೃತ್ತಿಯ ಅಭಿವೃದ್ಧಿಗೆ ಆ ವೃತ್ತಿಪರರಲ್ಲಿ ವೃತ್ತಿಯನ್ನು ಬೆಳೆಸುವ ಬದ್ಧತೆ, ಆ ನಿಟ್ಟಿನಲ್ಲಿನ ಕಾರ್ಯಕ್ಷಮತೆ ಮತ್ತು ಸಾಂಘಿಕ ಪ್ರಯತ್ನಗಳು ಪ್ರಮುಖವಾಗುತ್ತವೆ. ಸಮಾಜಕಾರ್ಯ ವೃತ್ತಿಪರರಾದ ನಾವುಗಳು ನಮ್ಮ ರಾಷ್ಟ್ರದಲ್ಲಿ ನಮ್ಮ ವೃತ್ತಿಗೆ ಒಂದು ಅಭೂತಪೂರ್ವ ಸಾಮಾಜಿಕ ಮಾನ್ಯತೆಯನ್ನು

ತಂದುಕೊಡಬೇಕೆಂಬ ಛಲದೊಂದಿಗೆ ಕಾರ್ಯನಿರ್ವಹಿಸಬೇಕಿದೆ. ಈ ನಿಟ್ಟಿನಲ್ಲಿ ಹೆಜ್ಜೆಗಳನ್ನಿಟ್ಟಿರುವ ಲೇಖಕರಿಗೆ ಸಮಸ್ತ ವೃತ್ತಿಬಾಂಧವರ ಪರವಾಗಿ ಶುಭಾಶಯಗಳು ಮತ್ತು ಇವರ ಈ ರೀತಿಯ ಪ್ರಯತ್ನಗಳು ಮುಂದುವರಿಯುತ್ತಿರಲೆಂದು ಆಶಿಸುವೆ.

**ಡಾ.ರಮೇಶ್ ಬಿ**

ಪ್ರಾಧ್ಯಾಪಕರು

ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನ ವಿಭಾಗ

ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

# ಪರಿವಿಡಿ

## ಅಧ್ಯಾಯ–1

### ವ್ಯಕ್ತಿಗತ ಸಮಾಜಕಾರ್ಯ


| | | |
|---|---|---|
| 1.1 | ಪೀಠಿಕೆ | – 1 |
| 1.2 | ಪರಿಕಲ್ಪನೆ ಮತ್ತು ವಿಕಾಸ | – 7 |
| 1.3 | ಅರ್ಥ ಮತ್ತು ವ್ಯಾಖ್ಯೆಗಳು | – 10 |
| 1.4 | ಮೂಲಭೂತ ಪರಿಕಲ್ಪನೆಗಳು | – 11 |
| 1.5 | ಉದ್ದೇಶಗಳು | – 14 |


## ಅಧ್ಯಾಯ–2

### ವ್ಯಕ್ತಿಗತ ಸಮಾಜಕಾರ್ಯದ ತತ್ವಗಳು


| | | |
|---|---|---|
| 2.1 | ವೈಯಕ್ತೀಕರಣದ ತತ್ವ | – 17 |
| 2.2 | ಭಾವನೆಗಳನ್ನು ಉದ್ದೇಶಪೂರ್ವಕವಾಗಿ ಅಭಿವ್ಯಕ್ತಪಡಿಸಲು ಅವಕಾಶ ಕಲ್ಪಿಸುವ ತತ್ವ | – 20 |
| 2.3 | ಅಂಗೀಕಾರದ/ಸ್ವೀಕಾರ ತತ್ವ | – 21 |
| 2.4 | ನಿಯಂತ್ರಿತ ಭಾವನೆಗಳ ಅಂತರ್ಗತ ತತ್ವ | – 24 |
| 2.5 | ತೀರ್ಪುರಹಿತ ಪ್ರವೃತ್ತಿಯ ತತ್ವ | – 25 |
| 2.6 | ಅರ್ಥಿಯ ಸ್ವ–ನಿರ್ಣಯದ ತತ್ವ | – 26 |
| 2.7 | ಗೌಪ್ಯತೆಯ ತತ್ವ | – 29 |
| 2.8 | ಅರ್ಥಪೂರ್ಣ ಸಂಬಂಧ ತತ್ವ | – 30 |
| 2.9 | ಸಂವಹನ ತತ್ವ | – 31 |
| 2.10 | ಸ್ವ–ಅರಿವಿನ ತತ್ವ | – 31 |
| 2.11 | ಸಾಮಾಜಿಕ ಚಟುವಟಿಕೆಯ ತತ್ವ | – 31 |

2.12 ವರ್ತನೆ ಮಾರ್ಪಡಿಸುವಿಕೆಯ ತತ್ವ – 32
2.13 ಸಾಮಾಜಿಕ ಕಲಿಕೆಯ ತತ್ವ – 33

**ಅಧ್ಯಾಯ–3**
**ವ್ಯಕ್ತಿಗತ ಸಮಾಜಕಾರ್ಯದ ಘಟಕಾಂಶಗಳು**
3.1 ವ್ಯಕ್ತಿ/ಅರ್ಥಿ – 35
3.2 ಸಮಸ್ಯೆ – 37
3.3 ಸ್ಥಳ – 40
3.4 ಪ್ರಕ್ರಿಯೆ/ವಿಧಾನ – 42
3.5 ವೃತ್ತಿಪರ ಪ್ರತಿನಿಧಿ – 45

**ಅಧ್ಯಾಯ–4**
**ವ್ಯಕ್ತಿಗತ ಸಮಾಜಕಾರ್ಯ ಪ್ರಕ್ರಿಯೆ**
4.1 ಆರಂಭಿಕ ಭೇಟಿ – 47
4.2 ಮನೋ–ಸಾಮಾಜಿಕ ಅಧ್ಯಯನ – 48
4.3 ಸಾಮಾಜಿಕ ರೋಗನಿಧಾನ/ರೋಗನಿರ್ಣಯ – 50
4.4 ಚಿಕಿತ್ಸೆ – 53

**ಅಧ್ಯಾಯ–5**
**ವ್ಯಕ್ತಿಗತ ಸಮಾಜಕಾರ್ಯದ ಮಾರ್ಗದೃಷ್ಟಿಗಳು**
5.1 ಮನೋವಿಶ್ಲೇಷಣಾ ಮಾರ್ಗದೃಷ್ಟಿ – 59
5.2 ಮನೋ–ಸಾಮಾಜಿಕ ಸಿದ್ಧಾಂತ – 64
5.3 ಸಮಸ್ಯೆ ಪರಿಹರಿಸುವ ಮಾದರಿ/ಸಿದ್ಧಾಂತ – 67
5.4 ನಡವಳಿಕೆ ಬದಲಾವಣೆ/ಮಾರ್ಪಡಿಸುವಿಕೆಯ ಸಿದ್ಧಾಂತ – 69
5.5 ವಿಷಮಸ್ಥಿತಿ/ಬಿಕ್ಕಟ್ಟಿನ ಮಧ್ಯಸ್ಥಿಕೆ – 76
5.6 ಎಕ್ಲೆಕ್ಟಿಕ್ ಮಾಗ್ಯದೃಷ್ಟಿ – 81

**ಅಧ್ಯಾಯ–6**

**ವ್ಯಕ್ತಿಗತ ಸಮಾಜಕಾರ್ಯದ ಸಾಧನಗಳು ಮತ್ತು ತಂತ್ರಗಳು**


6.1 ಸಂದರ್ಶನ – 84
6.2 ಗೃಹ ಭೇಟಿ – 87
6.3 ಸಂಪನ್ಮೂಲ ಕ್ರೋಢೀಕರಣ – 88
6.4 ಉಲ್ಲೇಖಿತ – 89
6.5 ಪರಿಸರ ಮಾರ್ಪಡಿಸುವಿಕೆ – 89
6.6 ವ್ಯಕ್ತಿಗತ ಸಮಾಜಕಾರ್ಯದ ಸಂಬಂಧ – 90
6.7 ಸಂವಹನ – 94
6.8 ದಾಖಲೀಕರಣ – 101


**ಅಧ್ಯಾಯ–7**

**ವಿವಿಧ ಸಂರಚನೆಗಳಲ್ಲಿ ವ್ಯಕ್ತಿಗತ ಸಮಾಜಕಾರ್ಯಕರ್ತರ ಪಾತ್ರ**


7.1 ಮಕ್ಕಳ ಕಲ್ಯಾಣ – 105
7.2 ಕುಟುಂಬ ಕಲ್ಯಾಣ – 106
7.3 ಮಹಿಳೆಯರು – 107
7.4 ಸಮುದಾಯ ಮತ್ತು ಗ್ರಾಮೀಣ ಅಭಿವೃದ್ಧಿ – 110
7.5 ಔದ್ಯೋಗಿಕ ಕ್ಷೇತ್ರ / ರಚನೆಗಳು – 111
7.6 ಆರೋಗ್ಯ ಪಾಲನಾ ಕ್ಷೇತ್ರ / ರಚನೆ – 112
7.7 ಪರಿಸರ – 114


**ಅನುಬಂಧಗಳು**


1. ವ್ಯಕ್ತಿಗತ ಸಮಾಜಕಾರ್ಯ ವರದಿಯ ಮಾದರಿ – 119
2. ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳ ಪಠ್ಯಕ್ರಮ – 125
3. ಮಾದರಿ ಪ್ರಶ್ನೆಗಳು – 151

**ಆಕರ ಗ್ರಂಥಗಳು** – 154

# ಅಧ್ಯಾಯ-1
# ವ್ಯಕ್ತಿಗತ ಸಮಾಜಕಾರ್ಯ (Social Case Work)

## 1.1 ಪೀಠಿಕೆ:

ಮನುಷ್ಯ ಸಂಘ ಜೀವಿಯಾಗಿರುವುದರಿಂದ ಸಮಾಜದಿಂದ ಬೇರ್ಪಟ್ಟು ಜೀವಿಸಲು ಸಾಧ್ಯವಿಲ್ಲ. ಮನುಷ್ಯ ಮತ್ತು ಸಮಾಜದ ನಡುವೆ ಬಿಡಿಸಲಾಗದ ಬಾಂಧವ್ಯವಿದ್ದು, ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಮಾನವನ ಸಾಮಾಜಿಕ ಸಂಬಂಧಗಳ ಜಾಲವೇ ಆಗಿರುವ ಸಮಾಜದಿಂದ ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಮನುಷ್ಯ ತನ್ನ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಲು ಸಮಾಜವನ್ನು ಅವಲಂಬಿಸಿರುವ ಕಾರಣ ಸಮಾಜವೇ ಮನುಷ್ಯ ಜೀವನಕ್ಕೆ ಆಧಾರ. ಸಾಮಾಜಿಕ ಪ್ರಾಣಿಯಾಗಿರುವ ಮನುಷ್ಯನ ಜೀವನ ಅಡಗಿರುವುದು ಸಹ-ಜೀವನ ಮತ್ತು ಸಂಘ-ಜೀವನದಲ್ಲಿ ಎಂದರೆ ತಪ್ಪಾಗದು. ಮನುಷ್ಯ ತನ್ನ ಜೀವನವನ್ನು ಸುಗಮವಾಗಿ ನಡೆಸುವಲ್ಲಿ ಸಮಾಜವು ಬಹುಮುಖ್ಯ ಪಾತ್ರವನ್ನು ನಿರ್ವಹಿಸುವುದರಿಂದ ಸಮಾಜ ಮತ್ತು ಮನುಷ್ಯನ ನಡುವೆ ಅವಿನಾಭಾವ ಸಂಬಂಧ ಏರ್ಪಟ್ಟಿದೆ. ಮನುಷ್ಯನ ಜೀವನಕ್ಕೆ ಸಾಮಾಜಿಕ ಸಂಬಂಧಗಳು ಅತ್ಯಗತ್ಯವಾಗಿದ್ದು, ಇವುಗಳು ಸಮಾಜದ ಭಾಗವಾಗಿರುವ ಇತರೆ ವ್ಯಕ್ತಿಗಳ ಜೊತೆಗೆ ಪರಿಸರದೊಂದಿಗಿನ ಸಂಬಂಧವೂ ಆಗಿದೆ. ವಾಸ್ತವವಾಗಿ ಮನುಷ್ಯನ ಗುಣ ಮತ್ತು ವ್ಯಕ್ತಿತ್ವವನ್ನು ರೂಪಿಸುವುದು ಅವನು ಹೊಂದಿರುವ ಸಾಮಾಜಿಕ ಸಂಬಂಧಗಳಾದ್ದರಿಂದ ಸಮಾಜದ ಸದಸ್ಯರೊಂದಿಗೆ ಹಾಗೂ ಪರಿಸರದೊಂದಿಗೆ ಉತ್ತಮ ಮತ್ತು ಆರೋಗ್ಯಕರ ಸಾಮಾಜಿಕ ಸಂಬಂಧವನ್ನು ಹೊಂದಿರಬೇಕು.

ಮನುಷ್ಯ ಮತ್ತು ಸಮಾಜದೊಂದಿಗಿನ ಸಂಬಂಧ ಆರೋಗ್ಯಕರವಾಗಿದ್ದರೆ ಮನುಷ್ಯನ ಜೀವನವೂ ಸುಗಮವಾಗಿ ಸಾಗುತ್ತದೆ. ಒಂದು ವೇಳೆ ಮನುಷ್ಯ ಮತ್ತು ಸಮಾಜದ ನಡುವಿನ ಸಂಬಂಧಗಳಲ್ಲಿ ಬಿರುಕುಂಟಾದರೆ ಮನುಷ್ಯನ ಜೀವನವೂ ಹದಗೆಡುತ್ತದೆ. ಅಂದರೆ ಸಾಮಾಜಿಕ ಸಂಬಂಧಗಳ ಜಾಲವೇ ಆಗಿರುವ ಸಮಾಜದ ಯಾವುದೇ ಅಂಗಕ್ಕೆ ಸಮಸ್ಯೆಯಾದರೂ ಅದು ಮಾನವನ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಆದ ಕಾರಣ ಮನುಷ್ಯ

ಸಮಾಜದ ಇತರ ಸದಸ್ಯರೊಂದಿಗೆ ಹಾಗೂ ಪರಿಸರದೊಂದಿಗೆ ಬಹಳ ಜಾಗರೂಕತೆಯಿಂದ ವ್ಯವಹರಿಸಬೇಕು. ಸಂಘಜೀವಿಯಾದ ಮಾನವ ತನ್ನ ಜೀವನ ನಿರ್ವಹಣೆಗೆ ಆಯ್ದುಕೊಳ್ಳುವ ವಿವಿಧ ಮಾರ್ಗಗಳು ಹಲವು ಸಂಘರ್ಷಗಳಿಗೆ ಎಡೆಮಾಡಿಕೊಡುತ್ತವೆ. ಅವುಗಳು ಮನುಷ್ಯ ಮತ್ತು ಸಮಾಜದ ಇತರ ಸದಸ್ಯರ ನಡುವಿನ ಸಾಮರಸ್ಯವನ್ನು ಹಾಳು ಮಾಡಬಹುದು ಅಥವಾ ಮನುಷ್ಯ ಮತ್ತು ಪರಿಸರದ ನಡುವಿನ ಕಾಳಗಕ್ಕೆ ಎಡೆಮಾಡಿಕೊಡಬಹುದು. ಹೀಗೆ ಉದ್ಭವವಾಗುವ ಸಮಸ್ಯೆಗಳು ವ್ಯಕ್ತಿಯ ಜೀವನದ ಜೊತೆಗೆ ಇಡೀ ಸಾಮಾಜಿಕ ವ್ಯವಸ್ಥೆಯ ಮೇಲೆ ಗಂಭೀರ ಪ್ರಭಾವವನ್ನು ಬೀರುತ್ತವೆ. ಮಾನವನ ದೈನಂದಿನ ಜೀವನ ನಿರ್ವಹಣೆಯ ಸಂದರ್ಭದಲ್ಲಿ ಉಂಟಾಗುವ ಸಾಮಾನ್ಯ ಎಡವಟ್ಟುಗಳಿಂದ ಎದುರಾಗುವ ಮನೋ–ಸಾಮಾಜಿಕ ಮತ್ತು ಮನೋ–ಪ್ರಾಕೃತಿಕ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಸೂಕ್ತ ಪರಿಹಾರಗಳನ್ನು ಒದಗಿಸುವ ನಿಟ್ಟಿನಲ್ಲಿ ಅಸ್ತಿತ್ವಕ್ಕೆ ಬಂದ ಅಧ್ಯಯನ ವಿಷಯವೇ ಸಮಾಜಕಾರ್ಯ. ದೈನಂದಿನ ಜೀವನದಲ್ಲಿ ಆಕಸ್ಮಿಕವಾಗಿ ಗತಿಸಿಹೋಗುವ ಸಂವಹನ ದೋಷಗಳಿಂದ ಉದ್ಭವಿಸುವ ಸಾಮಾನ್ಯ ಸಮಸ್ಯೆಗಳು ಮನುಷ್ಯನ ಸಾಮಾಜಿಕ ಸಂಬಂಧಗಳನ್ನು ಹಾಳುಮಾಡುತ್ತವೆ. ಬಿರುಕುಗೊಂಡ ಸಂಬಂಧಗಳು ಮನುಷ್ಯನ ಮಾನಸಿಕ ನೆಮ್ಮದಿಯ ಜೊತೆಗೆ ಇಡೀ ಸಾಮಾಜಿಕ ವ್ಯವಸ್ಥೆಯನ್ನು ಹಾಳು ಮಾಡುತ್ತವೆ. ಇದರ ಪರಿಣಾಮ ಮನುಷ್ಯ ಮಾನಸಿಕವಾಗಿ ಕೃಷನಾಗಿ ತನ್ನ ದೈನಂದಿನ ಪಾತ್ರಗಳನ್ನು ನಿರ್ವಹಿಸಲು ಅಸಮರ್ಥನಾಗುತ್ತಾನೆ. ಇಂತಹ ಸಂದರ್ಭದಲ್ಲಿ ಮಾನವನಿಂದ ಉದ್ಭವವಾದ ಸಮಸ್ಯೆಗಳನ್ನು ಅರಿತು, ಅವುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಹಿಡಿಯುವಲ್ಲಿ ನೆರವಾಗುವುದಕ್ಕೆ ಸಮಾಜಕಾರ್ಯ ವಿಷಯ ಅಧ್ಯಯನ ಸೂಕ್ತವಾಗಿದೆ.

ಸಮಾಜಕಾರ್ಯದ ಪರಿಕಲ್ಪನೆಯ ಬೆಳವಣಿಗೆಯನ್ನು ಸಾಮಾನ್ಯವಾಗಿ ದಾನದಿಂದ ಆಧುನಿಕ ಸವಾಜಕಾರ್ಯದವರೆಗೆ ನಿರೂಪಿಸಲಾಗಿದೆ. ಸಹಾಯಾರ್ಥಿಗಳಿಗೆ ನೀಡುವ ನೆರವಿನ ಆಧುನಿಕ ರೂಪವನ್ನು ವೈಜ್ಞಾನಿಕ ಸಮಾಜಕಾರ್ಯವೆಂದು ಹೇಳಲಾದರೂ, ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ಅರ್ಥಿಗಳಿಗೆ ನೀಡಿದ ಸೇವಾ ಮಜಲುಗಳಲ್ಲಿ ಭಿನ್ನತೆಯಿರುವುದನ್ನು ಕಾಣಬಹುದಾಗಿದೆ. ವೇದಗಳ ಕಾಲದಲ್ಲಿ ಅಗತ್ಯವಿರುವವರಿಗೆ ನೀಡುವ ಸಹಾಯವನ್ನು 'ದಾನ'ವೆಂದು ನಿರೂಪಿಸಿದರೆ, ಭಗದ್ಗೀತೆಯಲ್ಲಿ 'ದಾನ'ವೆಂದರೆ

ಕೇವಲ ವಸ್ತುರೂಪದ ಸಹಾಯ ಮಾತ್ರವಲ್ಲ ಜೊತೆಗೆ ಜ್ಞಾನ ಮತ್ತು ಭಯದಿಂದ ರಕ್ಷಣೆಯೂ ಆಗಿದೆ. 'ಕೊಡುವವನು ಪ್ರಕಾಶಿಸುವನು' ಎಂಬ ವೇದಗಳ ಕಾಲದ ಸಾಮಾಜಿಕ ತತ್ವಶಾಸ್ತ್ರ ಅಗತ್ಯವಿರುವವರಿಗೆ ಸಹಾಯ ಮಾಡಲು ಉಳ್ಳವರನ್ನು ಪ್ರೇರೇಪಿಸುವ ಉದ್ದೇಶದಿಂದ ಚಾಲನೆಗೆ ಬಂದಿತು. ಹಣ ಮತ್ತು ವಸ್ತುಗಳನ್ನು ಯಾರೂ ಸಹ ತಮ್ಮ ಸ್ವಂತಕ್ಕಾಗಿ ಶೇಖರಿಸಿಡಬಾರದು ಮತ್ತು ಎಲ್ಲರೂ ಸಮುದಾಯದ ಒಳಿತಿಗಾಗಿ ಕೆಲಸ ಮಾಡಬೇಕೆಂದು ಭಗವದ್ಗೀತೆಯ ತತ್ವಗಳಲ್ಲಿ ಸೂಚಿಸಲಾಗಿದೆ. ಅಭಯದಾನ, ಅಪರಿಗ್ರಹ ಹಾಗೂ ಲೋಕಸಂಗ್ರಹ ತತ್ವಗಳು, ಭಯದಿಂದ ಜನರನ್ನು ರಕ್ಷಿಸುವುದು ಹಾಗೂ ಲೋಕಕಲ್ಯಾಣಕ್ಕಾಗಿ ಸಂಪನ್ಮೂಲಗಳನ್ನು ಉಪಯೋಗಿಸುವುದರ ಬಗ್ಗೆ ಸಾರಿ ಹೇಳುತ್ತದೆ. ಉಪನಿಷತ್ತುಗಳ ಕಾಲದಲ್ಲಿ ಆಚರಣೆಯಲ್ಲಿದ್ದ 'ಇಷ್ಟ' ಹಾಗೂ 'ಪೂರ್ತ' ಎಂಬುವು ದಾನದ ರೂಪಗಳೇ ಆಗಿವೆ. ಇಷ್ಟವು ಯಜ್ಞ-ಯಾಗಾದಿಗಳ ಸಂಬಂಧಿ, ಕ್ರಿಯಾವಿಧ್ಯಾತ್ಮಕವಾಗಿ ಅಗ್ನಿಗೆ ಸಲ್ಲಿಸುವ ನಿವೇದನೆಗಳು, ಸ್ತೋತ್ರ ಪದ್ಯಗಳು ಮತ್ತು ಮಂತ್ರಾಭಿಚಾರಗಳನ್ನು ಪ್ರತಿನಿಧಿಸಿದರೆ, ಪೂರ್ತವು ವಾಪಿ-ಕೂಪ-ತಕಟಾದಿಗಳನ್ನು ಅಂದರೆ ಬಾವಿ-ಕೆರೆ-ಜಲಸಂಗ್ರಹ-ಕಾಲುವೆಗಳ ನಿರ್ಮಾಣ, ಸಸಿಗಳನ್ನು ನೆಟ್ಟು ಬೆಳೆಸುವುದು, ಅರಣ್ಯಗಳನ್ನು ಬೆಳೆಸುವುದು; ದೇವಸ್ಥಾನ, ಛತ್ರ, ವಿಶ್ರಾಂತಿ ಧಾಮ, ಶಾಲೆ, ಆಸ್ಪತ್ರೆ, ಇತ್ಯಾದಿಗಳನ್ನು ಕಟ್ಟಿಸುವುದು; ರಸ್ತೆ, ಉದ್ಯಾನ, ಸಾರ್ವಜನಿಕ ತೋಟಗಳನ್ನು ವಿನ್ಯಾಸಗೊಳಿಸುವುದು; ಸ್ನಾನಘಟ್ಟ, ಸೇತುವೆ ಇತ್ಯಾದಿಗಳ ನಿರ್ಮಾಣವನ್ನು ಪ್ರತಿನಿಧಿಸುತ್ತದೆ. ಈ ಎಲ್ಲ ಕಾರ್ಯಗಳನ್ನು ಔಪಚಾರಿಕವಾಗಿಯೂ, ಸಮಾರಾಧನೆಯ ಮೂಲವಾಗಿಯೂ ದೇವಪೂಜೆಯೆಂದೂ ಜನಸೇವೆಗೆಂದೂ ಅರ್ಪಿಸಲಾಗುತ್ತಿತ್ತು. ಹೀಗೆ ಕಾಲದಿಂದ ಕಾಲಕ್ಕೆ ಸೇವೆಯ ವಿವಿಧ ಮಜಲುಗಳು ಬದಲಾಗುತ್ತಿದ್ದರೂ ಮನುಷ್ಯನ ಉನ್ನತಿಯೇ ಇವುಗಳ ಪ್ರಮುಖ ಗುರಿಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಮನುಷ್ಯನನ್ನು ವೇದನಾಮುಕ್ತವಾಗಿಸುವ ನಿಟ್ಟಿನಲ್ಲಿ ಮಹಾತ್ಮ ಬುದ್ಧರ ಅಷ್ಟಾಂಗ ಸೂತ್ರಗಳು, ಜೈನರ ಹನ್ನೆರಡು ವಿಧಿಗಳು ಮತ್ತು ಸಪ್ತ ತತ್ವಗಳು, ಕ್ರೈಸ್ತ ಧರ್ಮದ ತತ್ವಗಳು, ಇಸ್ಲಾಂ ಧರ್ಮದ ಪಂಚ ತತ್ವಗಳ ಕೊಡುಗೆ ಅಪಾರ. ಸಮಾಜದಲ್ಲಿ ಹುಲುಸಾಗಿ ಬೆಳೆಯುತ್ತಿದ್ದ ಮೌಢ್ಯತೆಯನ್ನು ತೊಡೆದುಹಾಕಿ ಆರೋಗ್ಯಕರ ಸಮ-

ಸಮಾಜದ ನಿರ್ಮಾಣದಲ್ಲಿ ಸಾಮಾಜಿಕ ಸುಧಾರಣಾ ಚಳುವಳಿಗಳು ಮತ್ತು ಭಕ್ತಿಚಳುವಳಿಗಳ ಕೊಡುಗೆ ಶ್ಲಾಘನೀಯ.

ಮನುಷ್ಯ – ಸಮಾಜ – ಪರಿಸರದ ನಡುವೆ ಅವಿನಾಭಾವ ಸಂಬಂಧವಿದ್ದು, ಒಂದಕ್ಕೊಂದು ಅಂತರ್ಗತವಾಗಿವೆ. ಇವುಗಳ ನಡುವಿನ ಸಂಬಂಧ ಸಂಕೀರ್ಣತೆಯಿಂದ ಕೂಡಿದ್ದು, ಇವುಗಳಲ್ಲಿ ಯಾವುದಾದರೂ ಒಂದಕ್ಕೆ ಹಾನಿಯಾದರೂ ಇಡೀ ವ್ಯವಸ್ಥೆಯೇ ನಲುಗುತ್ತದೆ. ಬದಲಾದ ಪರಿಸ್ಥಿತಿಗಳಿಗೆ ಅನುಗುಣವಾಗಿ ಮನುಷ್ಯನು ಎದುರಿಸುವ ಸಮಸ್ಯೆಗಳೂ ಬದಲಾದವು. ವೇದಗಳ ಕಾಲದಲ್ಲಿ ದಾನವೇ ಪರಮೋಚ್ಚವಾದರೆ ಉಪನಿಷತ್ತುಗಳ ಕಾಲದಲ್ಲಿ ಪರಿಸರ ಸಂರಕ್ಷಣೆಯೂ ಪ್ರಾಮುಖ್ಯತೆಯನ್ನು ಪಡೆಯಿತು. ಮಾನಸಿಕ ಕ್ಷೋಭೆಯಿಂದ ಬಳಲುತ್ತಿದ್ದ ಮನುಷ್ಯನನ್ನು ಸಾಂತ್ವನಿಸಲು ಮಹಾತ್ಮ ಬುದ್ಧರೇ ಬರಬೇಕಾಯಿತು. ಸತ್ಯ, ಅಹಿಂಸೆಯ ಮಹತ್ವವನ್ನು ಸಾರಲು ಮಹಾವೀರರು ಜನ್ಮಿಸಬೇಕಾಯಿತು. ಸಮಾಜದಲ್ಲಿದ್ದ ಮೌಢ್ಯಗಳನ್ನು ತೊಲಗಿಸಿ ಶಾಂತಿ ಸ್ಥಾಪಿಸಲು ಸಾಮಾಜಿಕ ಚಳುವಳಿಗಳು ರೂಪುತಳೆಯಬೇಕಾದವು. ಈ ಎಲ್ಲ ಆಗುಹೋಗುಗಳಿಗೆ ಜಟಿಲವಾಗುತ್ತಿರುವ ಮಾನವನ ಸಾಮಾಜಿಕ ಸಂಬಂಧಗಳೇ ಕಾರಣವೆಂದರೆ ತಪ್ಪಾಗುವುದಿಲ್ಲ. ಮನುಷ್ಯ–ಸಮಾಜ–ಪರಿಸರದ ನಡುವಿನ ತೀವ್ರ ಸಂಘರ್ಷದ ಫಲವಾಗಿ ಹಳಸಿದ ಮಾನವ ಸಂಬಂಧಗಳು ಕಾಲಾನಂತರದಲ್ಲಿ ಮನುಷ್ಯ ಅನುಭವಿಸುವ ವೇದನೆಗಳಿಗೆ ಮತ್ತು ಸಮಸ್ಯೆಗಳಿಗೆ ಕಾರಣವಾದವು. ಹೀಗೆ ತೀವ್ರರೂಪ ಪಡೆದ ಸಮಸ್ಯೆಗಳಿಂದ ಮಾನವನನ್ನು ರಕ್ಷಿಸುವ ಸಲುವಾಗಿ ಸಮಾಜ ಮತ್ತು ಪರಿಸರದ ನಡುವಿನ ಮಾನವನ ಸಂಬಂಧವನ್ನು ಸದೃಢವಾಗಿಸಲು ಸಮಾಜಕಾರ್ಯ ಎಂಬ ಹೊಸ ವಿಷಯ ರೂಪುತಳೆಯಿತು.

ಸಮಾಜಸೇವೆ ಎಂದೇ ಕರೆಯಲ್ಪಡುತ್ತಿದ್ದ ಸಮಾಜಕಾರ್ಯ ಈ ಹಿಂದೆ ಸೀಮಿತವಾಗಿದ್ದು, ಪ್ರತಿಯೊಬ್ಬರೂ ಕೈಗೊಳ್ಳಬಹುದಾದಂತಹ ಕಾರ್ಯವಾಗಿತ್ತು. ಪುರಾತನ ಕಾಲದಿಂದಲೂ ಭಾರತದಲ್ಲಿ ಸಮಾಜಕಾರ್ಯದ ಬೇರುಗಳನ್ನು ಕಾಣಬಹುದಾಗಿದ್ದರೂ ಅದಕ್ಕೆ ಸೈದ್ಧಾಂತಿಕ ರೂಪ ನೀಡಿದ್ದು ಮಾತ್ರ ಇಪ್ಪತ್ತನೇ ಶತಮಾನದಲ್ಲಿ. ಸರ್ವರ ಒಳಿತಿಗಾಗಿ ಹಮ್ಮಿಕೊಳ್ಳುತ್ತಿದ್ದ ಯಜ್ಞ, ಹೋಮ–ಹವನ, ವೇದಗಳ ಕಾಲದಲ್ಲಿ ರೂಢಿಯಲ್ಲಿದ್ದ ದಾನ–ಧರ್ಮಗಳು ಪುರಾತನ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಸಮಾಜಕಾರ್ಯಕ್ಕೆ ಹಿಡಿದಗನ್ನಡಿಗಳಾಗಿವೆ. ಸಮಾಜಸೇವೆ

ಎಂಬ ಪರಿಕಲ್ಪನೆಯಡಿಯಲ್ಲಿ ಇವುಗಳನ್ನು ಬಂಧಿಸಿದ್ದರೂ ಸಮಾಜಕಾರ್ಯದಿಂದ ಬೇರ್ಪಡಿಸಲು ಅಸಾಧ್ಯ. ಸಮಾಜಕಾರ್ಯ ಹುಟ್ಟಿದ್ದೇ ಸಮಾಜಸೇವೆಯಿಂದ. ಆಧುನಿಕ ಸಮಾಜಕಾರ್ಯದಲ್ಲಿ ಸೇವೆ (Service) ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿರುವುದಲ್ಲದೇ ಸಮಾಜಕಾರ್ಯದ ಮೌಲ್ಯಗಳಲ್ಲಿ ಒಂದಾಗಿದೆ. ಇದು ಸಮಾಜಕಾರ್ಯದಲ್ಲಿ ಸೇವೆಯ ಮಹತ್ವವನ್ನು ಸಾರುತ್ತದೆ. ಮಾನವನ ಶ್ರೇಯಸ್ಸಿಗೇ ಅಲ್ಲದೇ ಪಶು, ಪ್ರಾಣಿ–ಪಕ್ಷಿಗಳ ಕಲ್ಯಾಣಕ್ಕಾಗಿ ಅಶೋಕನು ಕೈಗೊಂಡ ಕಾರ್ಯಗಳನ್ನು ಹೊರತುಪಡಿಸಿದ ಸಮಾಜಕಾರ್ಯ ವಿಷಯದ ಅಧ್ಯಯನ ಊಹಿಸಲು ಅಸಾಧ್ಯ. ಮಾನವ ಸಂಕುಲ ಸುಭೀಕ್ಷವಾಗಿರಬೇಕಾದರೆ ಪರಿಸರ ಆರೋಗ್ಯಕರವಾಗಿರಬೇಕೆಂಬ ಅಂಶವನ್ನು ಅರಿತಿದ್ದ ನಮ್ಮ ಪೂರ್ವಜರು ಹೋಮ ಹವನಗಳ ಮೂಲಕ ವಾಯುವನ್ನು ಶುದ್ಧಿಗೊಳಿಸಿದರೆ, ಜೀವ ಜಲವನ್ನು ಗಂಗೆಯೆಂತಲೂ, ಪರಿಸರವನ್ನು ಭಕ್ತಿಭಾವಗಳಿಂದ ಪೂಜಿಸಿ ಆರಾಧಿಸುತ್ತಿದ್ದರು. ಜೊತೆಗೆ ಸೂರ್ಯ, ಚಂದ್ರ, ವರುಣ, ವಾಯು, ವೃಕ್ಷ ಇವೇ ಮೊದಲಾದವುಗಳನ್ನು ಪೂಜ್ಯಭಾವದಿಂದ ಕಾಣುತ್ತಿದ್ದರು. ಅದೊಂದು ಸಂಘಟಿತ ಕಾರ್ಯವಾಗಿತ್ತು. ಇಡೀ ಸಮುದಾಯವೇ ಹೋಮ–ಹವನಗಳಲ್ಲಿ ಭಾಗಿಯಾಗಿ ಎಲ್ಲರ ಶ್ರೇಯಕ್ಕೆ ಎಲ್ಲರೂ ಶ್ರಮಿಸುತ್ತಿದ್ದರು. ಈ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಮನುಷ್ಯನ ಶ್ರೇಯಸ್ಸಿಗೆ ಸಮಾಜವೂ ಸೇರಿದಂತೆ ಪರಿಸರದ ನಡುವಿನ ಸಂಬಂಧ ಆರೋಗ್ಯಕರವಾಗಿರಲೇಬೇಕೆಂಬ ಅಂಶ ಅರಿವಿಗೆ ಬರುತ್ತದೆ. ಮನುಷ್ಯ ಜೀವನದ ಆರಂಭ ಹಾಗೂ ಅಂತ್ಯ ಪರಿಸರ ಮತ್ತು ಸಮಾಜದಲ್ಲಿ ಗತಿಸುವುದರಿಂದ, ಇವುಗಳ ನಡುವಿನ ಸಾಮಾಜಿಕ ಸಂಬಂಧ ಆರೋಗ್ಯಕರವಾಗಿರಬೇಕು.

ಮನುಷ್ಯ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಸಮಾಜಕಾರ್ಯವು ಅಸ್ತಿತ್ವದಲ್ಲಿದೆ. ಪ್ರಾರಂಭದಲ್ಲಿ ಸಮಾಜಕಾರ್ಯವು ಅಧ್ಯಯನ ವಿಷಯವಾಗಿ ಸಂಘಟಿತ ರೂಪವನ್ನು ಪಡೆಯದಿದ್ದರೂ ತದನಂತರ ಸಮಾಜದಲ್ಲಿ ಮಾನವರು ಜೀವಿಸುವ ಸಲುವಾಗಿ ಪರಸ್ಪರ ಸಹಾಯವನ್ನು ಮಾಡಿಕೊಂಡಾಗ ಸಮಾಜಕಾರ್ಯ ಎಂಬ ವಿದ್ಯಮಾನ ಬೆಳಕಿಗೆ ಬಂತು. ಆರಂಭದಲ್ಲಿ ಸಮಾಜಕಾರ್ಯವು ಬಡವರ, ನಿರಾಶ್ರಿತರ ಮತ್ತು ನಿರ್ಗತಿಕರ ಶ್ರೇಯೋಭಿವೃದ್ಧಿಗೆ ಕಾರ್ಯನಿರ್ವಹಿಸುವ ಉದ್ದೇಶವನ್ನು ಹೊಂದಿದ್ದರೂ ಕಾಲಕ್ರಮೇಣ ಸಮಾಜಕಾರ್ಯ ಒಂದು ಅಧ್ಯಯನ ವಿಷಯವಾಗಿ ಹಾಗೂ ಒಂದು ವೃತ್ತಿಯಾಗಿ ರೂಪುಗೊಂಡಿತು. ಇದರ ಫಲವಾಗಿ

ಸೀಮಿತವಾಗಿದ್ದ ಸಮಾಜಕಾರ್ಯದ ಕ್ಷೇತ್ರ ವಿಸ್ತಾರವಾಯಿತು. ಪ್ರಸ್ತುತ ಸಮಾಜಕಾರ್ಯವು ಅತ್ಯಂತ ವಿಸ್ತೃತ ರೂಪವನ್ನು ಪಡೆದಿದ್ದು, ಸಮಾಜಕಾರ್ಯಕರ್ತರ ಸೇವೆಗಳನ್ನು ಸಮಾಜದ ಎಲ್ಲ ರಂಗಗಳಿಗೆ ವಿಸ್ತರಿಸಲಾಗಿದೆ. ಮಕ್ಕಳಿಂದ ವಯೋವೃದ್ಧರ ಸೇವೆಗಳಿಗೆ, ಶಾಲೆಗಳಿಂದ ಕಾರಾಗೃಹಗಳವರೆಗೆ, ಆಸ್ಪತ್ರೆಗಳು, ಕಂಪನಿಗಳು ಸೇರಿದಂತೆ ಗ್ರಾಮೀಣ, ನಗರ ಹಾಗೂ ಬುಡಕಟ್ಟು ಸಮುದಾಯಗಳವರೆಗೆ, ಕ್ಲಿಷ್ಟಕರ ಪರಿಸ್ಥಿತಿಯಲ್ಲಿರುವ ಮಕ್ಕಳು, ಮಹಿಳೆಯರು, ಯುವಕರು, ಉಭಯಲಿಂಗಿಗಳೂ ಸೇರಿದಂತೆ ಸಮಾಜದಲ್ಲಿ ಶೋಷಣೆ ಮತ್ತು ತಾರತಮ್ಯಕ್ಕೆ ಒಳಗಾಗುತ್ತಿರುವ ಎಲ್ಲ ವರ್ಗಗಳ ಜನರ ಕಲ್ಯಾಣಸೇವೆಗಳಲ್ಲಿ ಸಮಾಜಕಾರ್ಯಕರ್ತರು ಮಹತ್ತರ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ.

ಇಡೀ ಸಮಾಜವನ್ನೇ ಪ್ರಯೋಗಾಲಯ ಹಾಗೂ ಕಾರ್ಯಕ್ಷೇತ್ರವನ್ನಾಗಿ ಹೊಂದಿರುವ ಸಮಾಜಕಾರ್ಯಕ್ಕೆ ಕ್ರಮಬದ್ಧ ಮತ್ತು ವೈಜ್ಞಾನಿಕ ಜ್ಞಾನವೇ ಜೀವಾಳ. ಮೂಲತಃ ಸಮಾಜಕಾರ್ಯವನ್ನು ಜನರ ಜೊತೆಯಲ್ಲಿ ಹಮ್ಮಿಕೊಳ್ಳುವ ಕಾರ್ಯವಿಧಾನವೆಂದು ತಿಳಿಯಲಾಗಿದೆ. ಆದರೆ ಜನರ ಜೊತೆಯಲ್ಲಿ ಅಥವಾ ಜನರಿಗಾಗಿ ಮತ್ತು ಅವರ ಪರವಾಗಿ ಮಾತ್ರ ಕೈಗೊಳ್ಳುವ ಕಾರ್ಯವೆಂದಲ್ಲ. ಬದಲಿಗೆ ಸಮಸ್ಯಾಪೀಡಿತ ವ್ಯಕ್ತಿ, ವೃಂದ ಹಾಗೂ ಸಮುದಾಯಗಳ ಜೊತೆಯಲ್ಲಿ ನಿರ್ವಹಿಸುವ ಕಾರ್ಯವಾಗಿದೆ. ಸಮಸ್ಯೆಯನ್ನು ಹೊಂದಿದ ವ್ಯಕ್ತಿ, ವೃಂದ ಹಾಗೂ ಸಮುದಾಯದ ಸಮಸ್ಯೆಗಳನ್ನು ಗುರುತಿಸಿ, ವೈಜ್ಞಾನಿಕ ಜ್ಞಾನದ ಅಡಿಯಲ್ಲಿ ಅವುಗಳನ್ನು ಅಭ್ಯಸಿಸಿ, ಅವರಲ್ಲಿ ಸುಪ್ತವಾಗಿ ಅಡಗಿರುವ ಶಕ್ತಿ ಸಾಮರ್ಥ್ಯಗಳನ್ನು ಗುರುತಿಸಿ, ಸಮಸ್ಯೆಗಳನ್ನು ಬಗೆಹರಿಸಲು ಅನಿವಾರ್ಯವಿರುವ ಸಂಪನ್ಮೂಲಗಳನ್ನು ತಂದೊದಗಿಸುವ ಮೂಲಕ ಸಮಸ್ಯೆಗಳಿಗೆ ಸೂಕ್ತ ಹಾಗೂ ಸುಸ್ಥಿರ ಪರಿಹಾರಗಳನ್ನು ಸೂಚಿಸುವ ಕಲೆಯೇ ಸಮಾಜಕಾರ್ಯವಾಗಿದೆ. ಅಸ್ತಿತ್ವದಲ್ಲಿರುವ ಎಲ್ಲ ವೃತ್ತಿಗಳಿಗೆ ತಮ್ಮವೇ ವೃತ್ತಿಪರ ಸೀಮಿತ ಕಾರ್ಯಗಳಿದ್ದರೆ, ಸಮಾಜಕಾರ್ಯಕ್ಕೆ ಸೀಮಿತ ಕಾರ್ಯಗಳಿಲ್ಲವೆಂಬುದು ಇಲ್ಲಿ ಗಮನಿಸಲೇಬೇಕಾದ ವಿಷಯ. ಸೀಮಿತ ಹಾಗೂ ನಿರ್ದಿಷ್ಟ ಎಲ್ಲೆಗಳಿಲ್ಲದ ಸಮಾಜಕಾರ್ಯವನ್ನು ಆರು ಸಾಮಾನ್ಯ ವಿಧಾನಗಳ ಮೂಲಕ ಅಭ್ಯಸಿಸಿ ಆಚರಿಸಲಾಗುತ್ತಿದೆ. ಇವುಗಳಲ್ಲಿ ವ್ಯಕ್ತಿಗತ ಸಮಾಜಕಾರ್ಯ, ವೃಂದಗತ ಸಮಾಜಕಾರ್ಯ ಹಾಗೂ ಸಮುದಾಯ ಸಂಘಟನೆಗಳು ಪ್ರಾಥಮಿಕ ಸಮಾಜಕಾರ್ಯ ವಿಧಾನಗಳಾದರೆ ಸಮಾಜಕಾರ್ಯ ಆಡಳಿತ, ಸಮಾಜಕಾರ್ಯ ಸಂಶೋಧನೆ ಮತ್ತು ಸಾಮಾಜಿಕ ಕ್ರಿಯೆ ದ್ವಿತೀಯ ವಿಧಾನಗಳಾಗಿವೆ.

## 1.2 ಪರಿಕಲ್ಪನೆ ಮತ್ತು ವಿಕಾಸ (Concept and Evolution)

ಸಮಾಜಕಾರ್ಯದ ಪ್ರಾಥಮಿಕ ವಿಧಾನಗಳಲ್ಲೊಂದಾದ ವ್ಯಕ್ತಿಗತ ಸಮಾಜಕಾರ್ಯ, ನೈಜರೂಪದಲ್ಲಿ ಸಮಾಜಕಾರ್ಯದ ಸ್ವರೂಪವನ್ನು ವ್ಯಾಖ್ಯಾನಿಸುತ್ತದೆ. ವ್ಯಕ್ತಿಯನ್ನು ಕೇಂದ್ರವಾಗಿರಿಸಿಕೊಂಡಿರುವ ಸಮಾಜಕಾರ್ಯದ ಈ ವಿಧಾನ ವ್ಯಕ್ತಿ ಹಾಗೂ ವ್ಯಕ್ತಿಯ ಸಮಸ್ಯೆಗಳನ್ನು ಬಗೆಹರಿಸುವತ್ತ ಗಮನಹರಿಸುತ್ತದೆ. ವ್ಯಕ್ತಿಯು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ಪರಿಹರಿಸಲು ಸರಿಯಾದ ಮಾರ್ಗೋಪಾಯಗಳನ್ನು ಕಂಡುಕೊಳ್ಳುವುದು ಅಥವಾ ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ಸಮಸ್ಯಾಪೀಡಿತ ವ್ಯಕ್ತಿಗಳಿಗೆ ನೆರವಾಗುವುದೇ ವ್ಯಕ್ತಿಗತ ಸಮಾಜಕಾರ್ಯದ ಪ್ರಮುಖ ಗುರಿಯಾಗಿದೆ. ಇದರಿಂದ ವ್ಯಕ್ತಿಯು ತನ್ನ ಸಂಪೂರ್ಣ ಕ್ರಿಯಾತ್ಮಕ ಮಟ್ಟಕ್ಕೆ ಪುನಃ ಮರಳುತ್ತಾನೆ/ಳೆ. ವ್ಯಕ್ತಿಯು ಕೇವಲ ಪ್ರಸ್ತುತ ಸಮಸ್ಯೆಗಳೊಂದಿಗೆ ಮಾತ್ರ ವ್ಯವಹರಿಸದೆ ಭವಿಷ್ಯದಲ್ಲಿ ಎದುರಾಗುವ ಸಮಸ್ಯೆಗಳನ್ನು ಬಾಹ್ಯ ಸಹಾಯವಿಲ್ಲದೆಯೇ ಎದುರಿಸುವಂತೆ ಸಜ್ಜುಗೊಳಿಸುವುದು ವ್ಯಕ್ತಿಗತ ಸಮಾಜಕಾರ್ಯದ ಪ್ರಮುಖ ಆಯಾಮಗಳಲ್ಲೊಂದಾಗಿದೆ. ಇಲ್ಲಿ ಸಮಸ್ಯಾಪೀಡಿತ ವ್ಯಕ್ತಿಯ ಸಮಸ್ಯೆ, ವ್ಯಕ್ತಿತ್ವ ಹಾಗೂ ಹಿನ್ನೆಲೆಯ ಅಧ್ಯಯನ ಮುಖ್ಯವಾಗುತ್ತದೆ.

ಮಾನವೀಯತೆಯ ಆಧಾರದ ಮೇಲೆ ಅಸ್ತಿತ್ವಕ್ಕೆ ಬಂದ ಸಾಮಾಜಿಕ ಸೇವೆ ಮತ್ತು ಸಮಾಜಕಾರ್ಯಗಳು 19ನೇ ಶತಮಾನದಲ್ಲಿ ಒಂದು ವ್ಯವಸ್ಥಿತ ರೂಪವನ್ನು ಪಡೆದವು. ಸಮಾಜಕಾರ್ಯವನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ನಿರೂಪಿಸಿದ ಕೀರ್ತಿ **ಮೇರಿ ಈ ರಿಚ್‌ಮಂಡ್**‌ರಿಗೆ ಸಲ್ಲುತ್ತದೆ. ಇವರು ವ್ಯವಸ್ಥಿತ ತರಬೇತಿಗಳನ್ನು ಆಯೋಜಿಸುವುದರ ಮೂಲಕ ಸಮಾಜಕಾರ್ಯಕ್ಕೆ ಒಂದು ಕ್ರಮಬದ್ಧತೆ ಹಾಗೂ ವೈಜ್ಞಾನಿಕತೆಯ ಹಿನ್ನೆಲೆಯನ್ನು ಒದಗಿಸಿದರು. ಬಡವರ ಕಲ್ಯಾಣಕ್ಕಾಗಿ 1843 ರಲ್ಲಿ ಆರಂಭವಾದ AICP (Association for Improving the Condition of Poor) ಸಂಸ್ಥೆಯು ಬಡವರ ಮನೆಗಳಿಗೆ ಭೇಟಿ ನೀಡಿ ಅವರಿಗೆ ಸೂಕ್ತ ಸಲಹೆಗಳನ್ನು ನೀಡುವುದರ ಮೂಲಕ ಆರ್ಥಿಕ ಸಬಲತೆಯನ್ನು ಹೊಂದಲು ಶ್ರಮಿಸಿತು. ಇದು ಬಡವರು ತಮ್ಮ ಜೀವನವನ್ನು ಗೌರವದಿಂದ ಮುನ್ನಡೆಸಲು ಸಹಕಾರಿಯಾಯಿತು. 1877 ರಲ್ಲಿ ಇಂಗ್ಲೆಂಡಿನಲ್ಲಿ ಅಸ್ತಿತ್ವಕ್ಕೆ ಬಂದ ಚಾರಿಟಿ ಆರ್ಗನೈಜೇಷನ್ ಸೊಸೈಟಿಯು (ಸಿ.ಓ.ಎಸ್) ವ್ಯಕ್ತಿಗಳ ಸಮಸ್ಯೆಗಳನ್ನು

# ಅಧ್ಯಾಯ-4

# ವ್ಯಕ್ತಿಗತ ಸಮಾಜಕಾರ್ಯದ ಪ್ರಕ್ರಿಯೆ

# (Process of Social Case Work)

'ನಿಶ್ಚಿತ ಗುರಿಯೆಡೆಗೆ ನಿರ್ದೇಶಿಸಲ್ಪಡುವ ಕ್ರಿಯೆಗಳ ಸರಣಿ ಅಥವಾ ನಿರ್ದಿಷ್ಟ ಫಲಿತಾಂಶದೆಡೆಗೆ ಮುನ್ನಡೆಸಲ್ಪಡುವ ಅನುಕ್ರಮ ಬದಲಾವಣೆ'ಯನ್ನು **ಪ್ರಕ್ರಿಯೆ** ಎಂದು ಕರೆಯಬಹುದು. ನಿಖರ ಫಲಿತಾಂಶ ಪಡೆಯುವ ಸಲುವಾಗಿ ಕೈಗೊಳ್ಳುವ ನಿರಂತರ ಕ್ರಿಯೆ, ಕಾರ್ಯಾಚರಣೆ ಅಥವಾ ಬದಲಾವಣೆಗಳ ಸರಣಿಯೇ ಪ್ರಕ್ರಿಯೆಯಾಗಿದ್ದು, ಇದನ್ನು ನಿರ್ದಿಷ್ಟ ರೀತಿಯಲ್ಲಿ ಕೈಗೊಂಡಾಗ ಮಾತ್ರ ಉದ್ದೇಶಿತ ಫಲಿತಾಂಶಗಳನ್ನು ಪಡೆಯಲು ಸಾಧ್ಯ. ನಿರ್ದಿಷ್ಟವಲ್ಲದ ಕಾರಣಗಳಿಂದಾಗಿ ವ್ಯಕ್ತಿತ್ವವನ್ನು ವಿಕಾಸ ಮಾಡಿಕೊಳ್ಳಲಾಗದ ಮಾನವ ಸಮಾಜದ ಇತರ ವ್ಯಕ್ತಿಗಳೊಂದಿಗೆ ಇರಿಸಿಕೊಳ್ಳಬೇಕಾದ ಸಂಬಂಧಗಳಿಂದ ದೂರವಾಗುತ್ತಾನೆ. ಈ ಕಾರಣದಿಂದ ತನ್ನ ಸುತ್ತಮುತ್ತಲಿನ ಸಾಮಾಜಿಕ ವಾತಾವರಣದ ವಾಸ್ತವವನ್ನು ಅರಿತು ಅದಕ್ಕನುಗುಣವಾಗಿ ಯೋಗ್ಯ ರೀತಿಯಲ್ಲಿ ಜೀವಿಸಲು ಅಸಮರ್ಥನಾಗುತ್ತಾನೆ. ಅರ್ಥಾತ್ ಸಮಸ್ಯಾಪೀಡಿತನಾಗುತ್ತಾನೆ. ಹೀಗೆ ಸಮಸ್ಯಾ ಪೀಡಿತನಾದ ಮಾನವನ ಸಾಮಾಜಿಕ ಸಮಸ್ಯೆಗಳ ಸ್ವರೂಪ ಹಾಗೂ ಜಟಿಲತೆಗಳನ್ನು ವ್ಯವಸ್ಥಿತವಾಗಿ ಅರಿತು, ಅವುಗಳಿಗೆ ಸೂಕ್ತ ಹಾಗೂ ವೈಜ್ಞಾನಿಕ ಪರಿಹಾರಗಳನ್ನು ನೀಡುವ ಸಲುವಾಗಿ ಪ್ರವರ್ಧಮಾನಕ್ಕೆ ಬಂದ ವೃತ್ತಿಯೇ ಸಮಾಜಕಾರ್ಯ. ವ್ಯಕ್ತಿಯ ಸಮಸ್ಯೆಗಳನ್ನು ವೈಯಕ್ತಿಕ ಹಂತದಲ್ಲಿ ಬಗೆಹರಿಸುವ ವಿಶಿಷ್ಟ ಗುಣವುಳ್ಳ ಸಮಾಜಕಾರ್ಯದ ಪ್ರಾಥಮಿಕ ವಿಧಾನಗಳಲ್ಲೊಂದಾದ ವ್ಯಕ್ತಿಗತ ಸಮಾಜಕಾರ್ಯವನ್ನು ಹಲವಾರು ಕ್ರಿಯೆಗಳ ಮೂಲಕ ಆಚರಿಸಬೇಕಾಗುವುದು. ವ್ಯಕ್ತಿ ಅಥವಾ ಅರ್ಥಿಯ ಸಮಸ್ಯೆಯನ್ನು ಅರಿತು, ಅಭ್ಯಸಿಸಿ, ಪರಿಶೀಲಿಸಿ ಹಾಗೂ

ಬಗೆಹರಿಸುವ ಸಂದರ್ಭದಲ್ಲಿ ವಿವಿಧ ಕ್ರಿಯೆ ಅಥವಾ ಹಂತಗಳನ್ನು ಅನುಸರಿಸಬೇಕಾದುದು ಅನಿವಾರ್ಯವಾಗಿದೆ. ವ್ಯಕ್ತಿಗತ ಸಮಾಜಕಾರ್ಯದ ಆಚರಣೆಯಲ್ಲಿ ಅನುಸರಿಸಲ್ಪಡುವ ಕ್ರಿಯೆಗಳ ಸರಣಿ ಅಥವಾ ಪ್ರಕ್ರಿಯೆಯನ್ನು ಮುಂದಿನಂತೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

## 4.1 ಆರಂಭಿಕ ಭೇಟಿ (The Initial Visit):

ಆರಂಭಿಕ ಭೇಟಿ ಎಂಬುದು ಅರ್ಥಿ ಮತ್ತು ಸಮಾಜಕಾರ್ಯಕರ್ತರ ನಡುವಿನ ಪ್ರಥಮ ಭೇಟಿಯಾಗಿದೆ. ನಿರ್ದಿಷ್ಟವಾದ ಕೆಲ ಸಮಸ್ಯೆಗಳಿಂದ ಬಳಲುತ್ತಿರುವ ವ್ಯಕ್ತಿ, ತನ್ನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಸಲುವಾಗಿ ಸಂಸ್ಥೆಗೆ ಭೇಟಿ ನೀಡಿದಾಗ, ಸಂಸ್ಥೆಯಲ್ಲಿ ವ್ಯಕ್ತಿಗತ ಸಮಾಜಕಾರ್ಯ ಕೈಗೊಳ್ಳುವ ಹೊಣೆ ಹೊತ್ತ ವ್ಯಕ್ತಿಗತ ಸಮಾಜಕಾರ್ಯಕರ್ತರ ಭೇಟಿಯಾಗುತ್ತದೆ. ಆರಂಭಿಕ ಭೇಟಿ ಅರ್ಥಿ ಹಾಗೂ ವ್ಯಕ್ತಿಗತ ಸಮಾಜಕಾರ್ಯಕರ್ತರ ಮಧ್ಯೆ ಉತ್ತಮ ಬಾಂಧವ್ಯ ವೃದ್ಧಿಸುವ ಪ್ರಕ್ರಿಯೆ ವ್ಯಕ್ತಿಗತ ಸಮಾಜಕಾರ್ಯದ ಪ್ರಥಮ ಹಂತವಾಗಿದೆ. ಈ ಆರಂಭಿಕ ಸಂದರ್ಶನದಲ್ಲಿ ವ್ಯಕ್ತಿಗತ ಸಮಾಜಕಾರ್ಯಕರ್ತರು ಅರ್ಥಿಯನ್ನು ಇದ್ದಂತೆಯೇ ಸ್ವೀಕರಿಸಲು ಪ್ರಯತ್ನಿಸುತ್ತಾರೆ ಮತ್ತು ಅರ್ಥಿ ತನ್ನ ಯಾವ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಸಂಸ್ಥೆಗೆ ಧಾವಿಸಿರುವನೋ ಆ ಸಮಸ್ಯೆಯನ್ನು ಪತ್ತೆಹಚ್ಚಲು ಪ್ರಯತ್ನಿಸುತ್ತಾರೆ. ಅರ್ಥಿಯ ಕುಟುಂಬದ ಸಂಕ್ಷಿಪ್ತ ಇತಿಹಾಸ, ಅರ್ಥಿ ಹೊಂದಿರುವ ಸಮಸ್ಯೆಯ ಹಿನ್ನೆಲೆ, ಅರ್ಥಿಯನ್ನು ಸಂಸ್ಥೆಗೆ ಉಲ್ಲೇಖಿಸಿದವರ ವಿವರ ಮತ್ತು ಉಲ್ಲೇಖಿಸುವ ಸಂದರ್ಭದಲ್ಲಿ ಅರ್ಥಿ ಎದುರಿಸುತ್ತಿದ್ದ ಸಮಸ್ಯೆ ಹಾಗೂ ಅರ್ಥಿಯ ವಾಸ್ತವದ ಗ್ರಹಿಕೆಗಳು ಇವೇ ಮೊದಲಾದ ಮಾಹಿತಿಗಳನ್ನು ಆರಂಭಿಕ ಭೇಟಿಯ ಸಂದರ್ಭದಲ್ಲಿ ಪಡೆಯಲಾಗುತ್ತದೆ. ಆರಂಭಿಕ ಭೇಟಿಯು ಔಪಚಾರಿಕವಾಗಿದ್ದು, ಉತ್ತಮ ವೃತ್ತಿಪರ ಸಂಬಂಧವನ್ನು ಸ್ಥಾಪಿಸುವುದಷ್ಟೇ ಇದರ ಪ್ರಮುಖ ಗುರಿಯಾಗಿದೆ. ಈ ಸಮಯದಲ್ಲಿ ವ್ಯಕ್ತಿಗತ ಸಮಾಜಕಾರ್ಯಕರ್ತರು ಅರ್ಥಿಯನ್ನು ಒಬ್ಬ ಸಾಮಾನ್ಯ ವ್ಯಕ್ತಿಯಂತೆ ಸ್ವೀಕರಿಸಿ, ಅವನ/ಳ ಸಮಸ್ಯೆಯ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಸಂಗ್ರಹಿಸುತ್ತಾನೆ.

## 4.2 ಮನೋ–ಸಾಮಾಜಿಕ ಅಧ್ಯಯನ (Psycho Social Study):

ಮನೋ–ಸಾಮಾಜಿಕ ಅಧ್ಯಯನ ವ್ಯಕ್ತಿಗತ ಸಮಾಜಕಾರ್ಯ ಪ್ರಕ್ರಿಯೆಯ ಎರಡನೇ ಹಂತವಾಗಿದ್ದು, ಅರ್ಥಿಯ ಮಾನಸಿಕ ಮತ್ತು ಸಾಮಾಜಿಕ ವಾಸ್ತವಗಳನ್ನು ಅಧ್ಯಯನ ಮಾಡಲು ಸಹಕಾರಿಯಾಗಿದೆ. ಸಮಾಜದ ಭಾಗವಾಗಿರುವ ಅರ್ಥಿಯಂತೆಯೇ ಅವನು/ಳು ಎದುರಿಸುತ್ತಿರುವ ಸಮಸ್ಯೆಗಳೂ ಸಹ ನೇರವಾಗಿ ಅಥವಾ ಪರೋಕ್ಷವಾಗಿ ಸಾಮಾಜಿಕ ಅಂಶಗಳಿಂದ ಉದ್ಭವಿಸಿದವುಗಳಾಗಿರುತ್ತವೆ. ಅಂತಿಮವಾಗಿ ಇವು ಅರ್ಥಿಯ ಮನಸ್ಸಿನ ಮೇಲೆ ಗಂಭೀರ ಪರಿಣಾಮವನ್ನು ಬೀರುತ್ತಾ ಅವನ/ಳ ಸಮಸ್ಯೆಗಳಿಗೆ ಕಾರಣಗಳಾಗಿರುತ್ತವೆ.

ಈ ಹಂತದಲ್ಲಿ ವ್ಯಕ್ತಿಗತ ಸಮಾಜಕಾರ್ಯಕರ್ತರು ಅರ್ಥಿಯ ಕುಟುಂಬದ ಇತಿಹಾಸಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕಲೆಹಾಕುವುದರ ಜೊತೆಗೆ ಅರ್ಥಿ ಎದುರಿಸುತ್ತಿರುವ ಸಮಸ್ಯೆ ಹಾಗೂ ಆ ಸಮಸ್ಯೆಯ ಬಗ್ಗೆ ಅರ್ಥಿಗಿರುವ ಗ್ರಹಿಕೆಯನ್ನು ತಿಳಿಯುವತ್ತ ತಮ್ಮ ಚಿತ್ತವನ್ನು ಕೇಂದ್ರೀಕರಿಸುತ್ತಾರೆ. ವ್ಯಕ್ತಿಗತ ಸಮಾಜಕಾರ್ಯದ ಪ್ರಸ್ತುತ ಹಂತದಲ್ಲಿ ಕೆಳಕಂಡ ವಿವರಗಳನ್ನು ಪತ್ತೆಹಚ್ಚುವ ನಿಟ್ಟಿನಲ್ಲಿ ವ್ಯಕ್ತಿಗತ ಸಮಾಜಕಾರ್ಯಕರ್ತರು ವ್ಯವಹರಿಸತೊಡಗುತ್ತಾರೆ.

- ಅರ್ಥಿಯ ವ್ಯಕ್ತಿತ್ವ, ಸ್ವಭಾವ, ವರ್ತನೆ ಹಾಗೂ ಅಳವಡಿಕೆಗಳ ಮಾದರಿಗಳನ್ನು ಅರ್ಥಮಾಡಿಕೊಳ್ಳುವುದು ಪ್ರಥಮ ಪ್ರಾಶಸ್ತ್ಯದ ಪ್ರಮುಖ ನೈಜ ವಿಷಯವಾಗಿದೆ.
- ಸಮಸ್ಯೆಯನ್ನು ಪತ್ತೆಹಚ್ಚುವುದು ಎರಡನೆಯ ಅತಿ ಮುಖ್ಯ ವಿಷಯವಾಗಿದೆ. ಈ ಹಂತದಲ್ಲಿ ವ್ಯಕ್ತಿಗತ ಸಮಾಜಕಾರ್ಯಕರ್ತರು ಸಮಸ್ಯೆಯ ಸ್ವರೂಪ, ಅರ್ಥಿ ಎದುರಿಸುತ್ತಿರುವ ನಿಖರ ಸಮಸ್ಯೆ ಮತ್ತು ಆ ಸಮಸ್ಯೆಯು ಅರ್ಥಿಯನ್ನೂ ಒಳಗೊಂಡಂತೆ ಅವನಿಗೆ/ಳಿಗೆ ಸಂಬಂಧಿಸಿದ ಇತರರನ್ನು ಭಾದಿಸುತ್ತಿರುವ ಪರಿಯನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಾರೆ. ಅರ್ಥಿಯ ಜೀವನದಲ್ಲಿ ಸಮಸ್ಯೆ ಉದ್ಭವಿಸಿದ ರೀತಿಯನ್ನು ತನಿಖೆ ಮಾಡುವುದೂ ಸಹ ಒಂದು ಪ್ರಮುಖ ಅಂಶವಾಗಿದೆ.
- ಅರ್ಥಿ ಸಮಸ್ಯೆಯನ್ನು ಗ್ರಹಿಸುವ ಅಥವಾ ಸ್ವೀಕರಿಸುವ ರೀತಿಯನ್ನು ಅರ್ಥೈಸಿಕೊಳ್ಳುವುದು ಸಮಸ್ಯೆಯನ್ನು ಪತ್ತೆಮಾಡಿದ ನಂತರದ ಹಂತವಾಗಿದೆ.

- ಸಮಾಜಕಾರ್ಯವು ಮಾನವರ ಘನತೆಯಲ್ಲಿ ನಂಬಿಕೆಯನ್ನಿಟ್ಟು ಪ್ರತಿಯೊಬ್ಬ ವ್ಯಕ್ತಿಯ ಸಮಸ್ಯೆಗಳನ್ನು ಪರಿಹರಿಸುವ ಗುಣಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ನೀಡುವುದರಿಂದ, ಮನೋ–ಸಾಮಾಜಿಕ ಅಧ್ಯಯನದ ಈ ಪ್ರಕ್ರಿಯೆಯಲ್ಲಿ ವ್ಯಕ್ತಿಗತ ಸಮಾಜಕಾರ್ಯಕರ್ತರು, ಅರ್ಥಿ ತನ್ನ ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಈಗಾಗಲೇ ಬಳಸಿದ ಹಾಗೂ ಬಳಸಲು ಯೋಜಿಸಿದ ಕಾರ್ಯತಂತ್ರಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಾರೆ.
- ಸಾಮಾನ್ಯವಾಗಿ ದೋಷಯುಕ್ತ ಸಾಮಾಜೀಕರಣ ಅಥವಾ ಅಸಮರ್ಪಕ ಮನೋ–ಸಾಮಾಜಿಕ ಬೆಳವಣಿಗೆಯಿಂದಾಗಿ (ಸಮಸ್ಯಾತ್ಮಕ ನಿದರ್ಶನಗಳಿಂದ ಬಾಲ್ಯದಲ್ಲಿ ಅಥವಾ ಬೆಳೆಯುವ ವಯಸ್ಸಿನಲ್ಲಿ ದೋಷಯುಕ್ತ ಬೆಳವಣಿಗೆ) ಜನರು ತಮ್ಮ ಜೀವನದಲ್ಲಿ ಸಮಸ್ಯೆಗಳನ್ನು ಎದುರಿಸುತ್ತಾರೆ ಎಂದು ಬಹಳ ಹಿಂದೆಯೇ ಅರ್ಥಮಾಡಿಕೊಳ್ಳಲಾಗಿದೆ. ಮನೋ–ಸಾಮಾಜಿಕ ಅಧ್ಯಯನದಲ್ಲಿ ಮನೋ–ಸಾಮಾಜಿಕ ಬೆಳವಣಿಗೆಯ ಹಂತಗಳನ್ನು ಮತ್ತು ಅರ್ಥಿಯ ಸಮಸ್ಯೆಯ ಸ್ವರೂಪವನ್ನು ಪರಿಣಾಮಕಾರಿಯಾಗಿ ಅರ್ಥಮಾಡಿಕೊಳ್ಳಲು, ಅರ್ಥಿಯ ಸಾಮಾಜೀಕರಣದ ಸಂರಚನೆಗಳನ್ನು ಅರಿಯುವುದು ವ್ಯಕ್ತಿಗತ ಸಮಾಜಕಾರ್ಯಕರ್ತರಿಗೆ ಬಹಳ ಮುಖ್ಯವಾಗಿದೆ.
- ವ್ಯಕ್ತಿಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಮನೋ–ಸಾಮಾಜಿಕ ಅಧ್ಯಯನದ ಕೊನೆಯ ಹಂತವಾಗಿದ್ದು, ಈ ಪ್ರಕ್ರಿಯೆಯಲ್ಲಿ ವ್ಯಕ್ತಿಯನ್ನು ಸಮಾಜದ ಭಾಗವೆಂದು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಈ ಪ್ರಯತ್ನದಲ್ಲಿ ವ್ಯಕ್ತಿಗತ ಸಮಾಜಕಾರ್ಯಕರ್ತರು ವ್ಯಕ್ತಿಯನ್ನು ಸಮಾಜದ ಭಾಗವೆಂದು ಗುರುತಿಸಲು ಪ್ರಯತ್ನಿಸುತ್ತಾರೆ ಮತ್ತು ವ್ಯಕ್ತಿಗೆ ಸಮಾಜದ ಇತರ ಸದಸ್ಯರೊಂದಿಗಿರುವ ಸಂಬಂಧಗಳ ಸಂರಚನೆಯನ್ನು ಹಾಗೂ ಅವು ವ್ಯಕ್ತಿಗೆ ಮತ್ತು ಆತನ/ಕೆಯ ಸಮಸ್ಯೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

## 4.3 ಸಾಮಾಜಿಕ ರೋಗನಿಧಾನ/ ರೋಗನಿರ್ಣಯ (Social Diagnosis):

ರೋಗನಿಧಾನ ಅಥವಾ ರೋಗನಿರ್ಣಯವೆಂದರೆ ಸಮಸ್ಯೆಯನ್ನು ಪತ್ತೆಹಚ್ಚುವುದಾಗಿದೆ. ಪರ್ಲ್‌ಮನ್ (1957) ರವರ ಪ್ರಕಾರ – "ಚಿಕಿತ್ಸೆಯ ಕೇಂದ್ರಬಿಂದುವನ್ನು ನಿರ್ಧರಿಸುವಲ್ಲಿ ರೋಗನಿಧಾನ ಸಹಕಾರಿಯಾಗಿದ್ದು, ಇದು ಆಧಾರಗಳನ್ನು ಸಂಗ್ರಹಿಸುತ್ತದೆ ಹಾಗೂ ಸಮಸ್ಯೆಯನ್ನು ಪರಿಹರಿಸಲು ಅತ್ಯುತ್ತಮ ಕ್ರಮವನ್ನು ನಿರ್ಧರಿಸುತ್ತದೆ". ಆದ್ದರಿಂದ ರೋಗನಿಧಾನವು ಅರ್ಥಿ ಎದುರಿಸುತ್ತಿರುವ ಸಮಸ್ಯೆಯ ವಿವಿಧ ಆಯಾಮಗಳನ್ನು ಹಾಗು ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಉದ್ದೇಶಕ್ಕಾಗಿ ಅವನ/ಳ ಪರಿಶೀಲನೆಯನ್ನು ಮೂಲಭೂತವಾಗಿ ಒಳಗೊಂಡಿದೆ.

ರೋಗನಿಧಾನವು ವ್ಯಕ್ತಿ, ಸಮಸ್ಯೆ ಮತ್ತು ಸಂಸ್ಥೆ ಎಂಬ ಮೂರು ಮುಖ್ಯ ಮೂಲಭೂತ ಅಂಶಗಳನ್ನು ಹೊಂದಿದೆ. ಸಮಸ್ಯೆಗೆ ಸಂಬಂಧಿಸಿದ ವಿವರಗಳನ್ನು ಕಲೆಹಾಕುವುದು, ಸಂಸ್ಥೆ ಅರ್ಥಿಗೆ ನೆರವಾಗುವ ವಿಧ ಹಾಗೂ ಸಹಾಯ ಮಾಡುವ ಹಾದಿಯನ್ನು ಕಂಡುಕೊಳ್ಳುವುದು ವ್ಯಕ್ತಿಗತ ಸಮಾಜಕಾರ್ಯಕರ್ತರ ಪ್ರಮುಖ ಪಾತ್ರವಾಗಿದೆ.

### 4.3.1 ಸಾಮಾಜಿಕ ರೋಗನಿಧಾನ ಪ್ರಕ್ರಿಯೆ (Process of Social Diagnosis)

- **ಮಾಹಿತಿಯನ್ನು ಕಲೆಹಾಕುವುದು:** ಅರ್ಥಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವುದು ವ್ಯಕ್ತಿಗತ ಸಮಾಜಕಾರ್ಯಕರ್ತರ ಪ್ರಾಥಮಿಕ ಕಾರ್ಯವಾಗಿದ್ದು, ಸಂದರ್ಶನಗಳ ಮೂಲಕ ಅಥವಾ ಮಾಧ್ಯಮಿಕ ಮಾಹಿತಿಯಾದ ಸಂಸ್ಥೆಯ ದಾಖಲೆಗಳ ಮೂಲಕ ಮಾಹಿತಿಯನ್ನು ಕಲೆಹಾಕುವರು. ಈ ಕ್ರಿಯೆ ಸಾಮಾಜಿಕ ರೋಗನಿಧಾನ ಹಾಗು ಚಿಕಿತ್ಸೆಯ ಯೋಜನೆಗಳನ್ನು ಸಿದ್ಧಪಡಿಸಲು ಪ್ರಾಥಮಿಕ ಮಾಹಿತಿಯಾಗಿ ಉಪಯೋಗವಾಗುತ್ತದೆ. ಅವಲೋಕನ, ಸಂದರ್ಶನಗಳು, ಪ್ರಶ್ನಾವಳಿಗಳು, ಸಂದರ್ಶನ ಅನುಸೂಚಿಗಳು, ಮನೆ/ಕಾರ್ಖಾನೆಗಳ ಭೇಟಿ ಇವೇ ಮೊದಲಾದ ಸಾಧನಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗುವುದು.
- **ರೋಗನಿಧಾನದ ಅಧ್ಯಯನ:** ಸಾಮಾನ್ಯವಾಗಿ ಅರ್ಥಿ ಅನೇಕ ಸಮಸ್ಯೆಗಳಿಂದ ಬಳಲುತ್ತಿದ್ದರೂ ತಾನು ಎದುರಿಸುತ್ತಿರುವ ಯಾವೊಂದು ಸಮಸ್ಯೆಯನ್ನೂ

# ಅಧ್ಯಾಯ-6
# ವ್ಯಕ್ತಿಗತ ಸಮಾಜಕಾರ್ಯದ ಸಾಧನಗಳು ಮತ್ತು ತಂತ್ರಗಳು
# (Tools and Techniques of Social Case Work)

ನಿರ್ದಿಷ್ಟ ಕಾರ್ಯವನ್ನು ಕೈಗೊಳ್ಳಲು ಬಳಸುವ ಉಪಕರಣವೇ **ಸಾಧನ** ಹಾಗೂ ನಿರ್ದಿಷ್ಟ ಗುರಿ ಸಾಧಿಸಲು ಪ್ರಮಾಣಿಕರಿಸಿದ ಒಂದು ಮಾರ್ಗವೇ **ತಂತ್ರ.** ವ್ಯಕ್ತಿಗತ ಸಮಾಜಕಾರ್ಯ ಪರಿಭಾಷೆಯಲ್ಲಿ ಇವುಗಳನ್ನು ಭಿನ್ನವಾಗಿಯೇ ಅರ್ಥೈಸಿಕೊಳ್ಳಬೇಕಾದ ಅನಿವಾರ್ಯತೆ ಇದ್ದು, ಅರ್ಥಿಗಳ ಸಮಸ್ಯೆಗಳನ್ನು ಸಮಗ್ರವಾಗಿ ಅಭ್ಯಸಿಸಿ ಅವುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಲು ಬಳಸುವ ವಿವಿಧ ಮಾರ್ಗ ಅಥವಾ ಉಪಾಯಗಳನ್ನು ಸಾಧನ ಮತ್ತು ತಂತ್ರಗಳೆಂದು ಪರಿಗಣಿಸಬಹುದಾಗಿದೆ. ವ್ಯಕ್ತಿಗತ ಸಮಾಜಕಾರ್ಯ ಪರಿಸ್ಥಿತಿಯಲ್ಲಿ ಅರ್ಥಿಯ ಮನೋ-ಸಾಮಾಜಿಕ ಸಮಸ್ಯೆಗಳನ್ನು ಅರಿತು, ಅವುಗಳನ್ನು ಕ್ರಮಬದ್ಧವಾಗಿ ಅಭ್ಯಸಿಸಿ, ಸೂಕ್ತ ಪರಿಹಾರಗಳನ್ನು ಒದಗಿಸುವ ಸಂದರ್ಭದಲ್ಲಿ ಉಪಯೋಗಿಸುವ ಕೆಲ ಪ್ರಮುಖ ಸಾಧನ ಮತ್ತು ತಂತ್ರಗಳನ್ನು ಈ ಕೆಳಕಂಡಂತೆ ಸರಳವಾಗಿ ವಿವರಿಸಲಾಗಿದೆ.

## 6.1 ಸಂದರ್ಶನ (Interview):

"...ಸಾಮಾಜಿಕ ರೋಗನಿಧಾನ (ರೋಗನಿರ್ಣಯ)ದಲ್ಲಿ ಬಳಸಿದ ಬಹುತೇಕ ಮಾಹಿತಿಗಳನ್ನು ಸಂರಕ್ಷಿಸಲು ಮತ್ತು ಈ ಮೂಲಕ ಚಿಕಿತ್ಸೆಯಲ್ಲಿನ ಬಹುತೇಕ ಫಲಿತಾಂಶಗಳನ್ನು ಭದ್ರಪಡಿಸುವ ಒಂದು ವಿಧಾನ" ಎಂದು ಸಂದರ್ಶನವನ್ನು ಸಮಾಜಕಾರ್ಯದಲ್ಲಿ ಸಾಮಾನ್ಯವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ. ವರ್ತನೆ ಹಾಗೂ ಭಾವನೆಗಳ ಬಗ್ಗೆ ಚರ್ಚೆಮಾಡಲು, ಆಲೋಚನಾ ಪ್ರಕ್ರಿಯೆಗಳನ್ನು ಅರ್ಥೈಸಿಕೊಳ್ಳಲು ಇವೇ ಮೊದಲಾದ ನಿರ್ಣಾಯಕ ಅಂಶಗಳ ಬಗ್ಗೆ ಮಾಹಿತಿ

ಸಂಗ್ರಹಿಸಲು ಉದ್ದೇಶಿಸಿರುವ ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳ (ಸಂದರ್ಶಕ ಮತ್ತು ಸಂದರ್ಶನಾರ್ಥಿ) ನಡುವಿನ ಮುಖಾಮುಖಿ ಅಂತರ್‌ಕ್ರಿಯೆ ಎಂದೂ ಸಹ ಸಂದರ್ಶನವನ್ನು ಅರ್ಥಮಾಡಿಕೊಳ್ಳಲಾಗುವುದು.

ಸಮಾಜಕಾರ್ಯ ಅಧ್ಯಯನ ಹಾಗೂ ಆಚರಣೆಗೆ ಸಂದರ್ಶನ ಮೂಲಭೂತ ಕಾರ್ಯತಂತ್ರವಾಗಿದ್ದು, ಇದರ ಮೇಲೆ ಸಮಾಜಕಾರ್ಯದ ಉಳಿದ ಎಲ್ಲ ಹಂತ ಹಾಗೂ ಹಸ್ತಕ್ಷೇಪಗಳು ಆಧಾರಿತವಾಗಿವೆ. ಸಹಾಯದ ನಿರೀಕ್ಷೆಯಲ್ಲಿರುವ ಅರ್ಥಿ ಮೊದಲಿಗೆ ಸಮಾಜಕಾರ್ಯಕರ್ತರು ಭೇಟಿಯಾಗಿ ಮುಖಾಮುಖಿ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾರೆ. ಇದು ಸಮಸ್ಯೆಗೆ ಸಂಬಂಧಿಸಿದ ವಾಸ್ತವಾಂಶಗಳನ್ನು ಸಂಗ್ರಹಿಸಲು ಸಹಕಾರಿಯಾಗುತ್ತದೆ ಮತ್ತು ಈ ಅಂಶಗಳ ಆಧಾರದ ಮೇಲೆ ಚಿಕಿತ್ಸಾ ವಿಧಾನಗಳು ಯೋಜಿಸಲ್ಪಡುತ್ತವೆ. ಆದ್ದರಿಂದ ಸಮಾಜಕಾರ್ಯ ಪ್ರಕ್ರಿಯೆ ಆರಂಭವಾಗುವುದೇ ಮೊದಲ ಭೇಟಿ ಅಥವಾ ಸಂದರ್ಶನದ ಮೂಲಕವಾಗಿದ್ದು, ಸಂದರ್ಶನವೇ ಮುಂದಿನ ಎಲ್ಲ ಬೆಳವಣಿಗೆಗಳಿಗೆ ಅಡಿಪಾಯವಾಗಿದೆ.

### 6.1.1 ಸಂದರ್ಶನದ ಉದ್ದೇಶಗಳು (Objectives of Interview):

- ಅರ್ಥಿಯಿಂದ ಅವನ/ಳ ಜೀವನ ಮತ್ತು ಸಮಸ್ಯೆಗಳ ಬಗೆಗಿನ ಮಾಹಿತಿಗಳನ್ನು ಹೊರಸೆಳೆಯುವುದು (ಕಲೆಹಾಕುವುದು).
- ಅವಶ್ಯಕತೆ ಇದ್ದಲ್ಲಿ ಮಾಹಿತಿಯನ್ನು ಒದಗಿಸುವುದು.
- ಅರ್ಥಿಯ ಕಾರ್ಯಚಟುವಟಿಕೆಯ ರೀತಿಗಳನ್ನು ಅರ್ಥಮಾಡಿಕೊಳ್ಳುವುದು.
- ಅರ್ಥಿಗೆ ನೇರ ಮಾತುಕತೆ ಮತ್ತು ಮುಖಾಮುಖಿ ಚರ್ಚೆಯ ಮೂಲಕ ಸಹಾಯವನ್ನು ಒದಗಿಸುವುದು
- ಅರ್ಥಿಗೆ ತಾನು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳುವಲ್ಲಿ ಮತ್ತು ಪರಿಹರಿಸಿಕೊಳ್ಳುವಲ್ಲಿ ನೆರವಾಗುವುದು.

### 6.1.2 ಸಂದರ್ಶನದ ವಿಧಗಳು (Types of Interview):

ಸಂದರ್ಶನವನ್ನು ಪ್ರಮುಖವಾಗಿ ಎರಡು ವಿಧಗಳನ್ನಾಗಿ ವರ್ಗೀಕರಿಸಬಹುದಾಗಿದ್ದು, ಅವುಗಳನ್ನು ಈ ಕೆಳಕಂಡಂತೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

- **ರಚನಾತ್ಮಕ ಸಂದರ್ಶನ (Structured Interview):** ಸಂದರ್ಶಕರ ಹಿಡಿತದಲ್ಲಿ ಬಹಳ ಕಟ್ಟುನಿಟ್ಟಾಗಿ ನಿಯಂತ್ರಿಸಲ್ಪಡುವ ರಚನಾತ್ಮಕ ಸಂದರ್ಶನವನ್ನು ನಿರ್ಬಂಧಿತ ಸಂದರ್ಶನವೆಂದು ಕರೆಯಬಹುದಾಗಿದೆ. ಸಾಮಾನ್ಯವಾಗಿ ಈ ವಿಧದ ಸಂದರ್ಶನಗಳಲ್ಲಿ ನಿಗಧಿತ ಸಂದರ್ಶನ ಅನುಸೂಚಿ ಅಥವಾ ಪ್ರಶ್ನಾವಳಿಯನ್ನು ಸಿದ್ಧಪಡಿಸಲಾಗುತ್ತದೆ ಮತ್ತು ವ್ಯಕ್ತಿಗತ ಸಮಾಜಕಾರ್ಯಕರ್ತರು ಕೇಳಿದ ಪ್ರಶ್ನೆಗಳಿಗೆ ಮಾತ್ರ ಅರ್ಥಿ ಉತ್ತರಿಸಬೇಕಾಗುತ್ತದೆ. ಈ ರೀತಿಯ ಸಂದರ್ಶನಗಳಲ್ಲಿ ಸಂದರ್ಶಕರು ಅರ್ಥಿಯನ್ನು ವಿಷಯಾಂತರವಾಗಿ ಅಥವಾ ಆಳವಾಗಿ ಪ್ರಶ್ನಿಸಿ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಯಾವುದೇ ಮಹತ್ವವಿರುವುದಿಲ್ಲ.
- **ರಚನಾರಹಿತ ಸಂದರ್ಶನಗಳು (Unstructured Interview):** ಇದು ಮುಕ್ತ ಅಥವಾ ಅನಿರ್ಬಂಧಿತ ಸಂದರ್ಶನವಾಗಿದ್ದು, ಇಲ್ಲಿ ಕೇಳುವ ಪ್ರಶ್ನೆಗಳು ಪೂರ್ವ ನಿರ್ಧರಿತವಾಗಿರುವುದಿಲ್ಲ. ಅರ್ಥಿ ನೀಡುವ ಉತ್ತರವನ್ನು ಆಧರಿಸಿ ಮುಂದಿನ ಪ್ರಶ್ನೆಯನ್ನು ಸಂದರ್ಶಕರು ಸಂಯೋಜಿಸಿ ಕೇಳುವರು. ಅರ್ಥಿಯಲ್ಲಿನ ಆಳವಾದ ವಿಷಯಗಳನ್ನು ಅರಿಯಲು ಈ ರೀತಿಯ ಸಂದರ್ಶನಗಳನ್ನು ಬಳಸಲಾಗುತ್ತದೆ. ಅರ್ಥಿ ಎದುರಿಸುತ್ತಿರುವ ಸಮಸ್ಯೆಯ ವಿವಿಧ ಮಜಲುಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಅವನ/ಳ ಸಮಸ್ಯೆಗಳನ್ನು ಪರಿಪೂರ್ಣವಾಗಿ ತಿಳಿಯಲು ಈ ವಿಧದ ಸಂದರ್ಶನ ಬಹಳ ಉಪಯುಕ್ತವಾಗಿದೆ.

ವ್ಯಕ್ತಿಗತ ಸಮಾಜಕಾರ್ಯದಲ್ಲಿ ಉಪಯೋಗಿಸಲ್ಪಡುವ ಸಂದರ್ಶನ ಅನುಸೂಚಿ (ವಿವರ ಪಟ್ಟಿ) ನಿರ್ಧಾರಿತ ರಚನೆಯಾಗಿದ್ದು, ಇದು ಈ ಕೆಳಕಂಡ ಅಂಶಗಳನ್ನು ಒಳಗೊಳ್ಳುತ್ತದೆ:

- ಅರ್ಥಿಯ ವೈಯಕ್ತಿಕ ವಿವರ.
  (ಹೆಸರು, ವಯಸ್ಸು, ಲಿಂಗ, ವಿದ್ಯಾರ್ಹತೆ, ವೈವಾಹಿಕ ಸ್ಥಿತಿಗತಿ, ಧರ್ಮ ಇತ್ಯಾದಿ)
- ಕೌಟುಂಬಿಕ ಹಿನ್ನೆಲೆ ಅಥವಾ ಕುಟುಂಬ ಸದಸ್ಯರ ವಿವರ.
  (ಅರ್ಥಿಯ ಕುಟುಂಬದವರ ಹೆಸರು ಮತ್ತು ಇತರೆ ಮಾಹಿತಿ)
- ಉಲ್ಲೇಖಿತ ಮೂಲ / ಸೂಚಿಸಿದವರ ಮೂಲ.

(ಸಂಸ್ಥೆ ಅಥವಾ ವ್ಯಕ್ತಿಗತ ಸಮಾಜಕಾರ್ಯಕರ್ತರ ಬಳಿ ಅರ್ಥಿಯನ್ನು ಕಳುಹಿಸಿದವರ ವಿವರ)

- ಉಲ್ಲೇಖಿತ ಸಮಸ್ಯೆ / ಸಮಸ್ಯೆಯ ವಿವರ
  (ಅರ್ಥಿ ಎದುರಿಸುತ್ತಿರುವ ಸಮಸ್ಯೆಯ ವಿವರವಾದ ಟಿಪ್ಪಣಿ)
- ಸಮಸ್ಯೆಯ ಇತಿಹಾಸ / ಹಿನ್ನೆಲೆ.
- ಅರ್ಥಿಯ ವೈಯಕ್ತಿಕ ಇತಿಹಾಸ / ಹಿನ್ನೆಲೆ.
- ಅರ್ಥಿಯ ಸಮಸ್ಯೆಯೊಂದಿಗೆ ಸಂಬಂಧ ಹೊಂದಿದ ಅಭ್ಯಾಸಗಳು/ಚಟಗಳು.
- ವರ್ತನೆಯಲ್ಲಿನ ವ್ಯತ್ಯಾಸಗಳು (ಲೈಂಗಿಕ ಅಲ್ಪಸಂಖ್ಯಾತರಾಗಿದ್ದ ಪಕ್ಷದಲ್ಲಿ ಮತ್ತು ಇತರೆ).
- ಸಮಸ್ಯೆಯ ಪರಿಣಾಮಗಳು.
- ವ್ಯಕ್ತಿಗತ ಸಮಾಜಕಾರ್ಯಕರ್ತರಿಂದ ಅರ್ಥಿಯ ನಿರೀಕ್ಷೆಗಳು.
- ವ್ಯಕ್ತಿಗತ ಸಮಾಜಕಾರ್ಯಕರ್ತರಿಂದ ಅರ್ಥಿಯ ನಡವಳಿಕೆ ಮತ್ತು ಅಂಗಿಕ ಭಾಷೆಯ ಅವಲೋಕನ.
- ಸಂದರ್ಶಿಸುವ ಕೌಶಲ್ಯಗಳು.
- ಉತ್ತಮ ಬಾಂಧವ್ಯವನ್ನು ಬೆಳೆಸುವ ಸಾಮರ್ಥ್ಯ.
- ಅನುಭೂತಿಯ ವರ್ತನೆ.
- ಉತ್ತಮ ಆಲಿಸುವಿಕೆ ಕೌಶಲ್ಯಗಳು.

## 6.2 ಗೃಹ ಭೇಟಿ (Home Visit)

ಸಾಮಾಜಿಕ ಪ್ರಾಣಿಯಾಗಿರುವ ಮನುಷ್ಯನ ವ್ಯಕ್ತಿತ್ವವು ಸಮಾಜ ಹಾಗೂ ಸಾಮಾಜಿಕ ಸಂಸ್ಥೆಗಳಿಂದ ರೂಪಿಸಲ್ಪಟ್ಟ ಕಾರಣ ವ್ಯಕ್ತಿಗತ ಸಮಾಜಕಾರ್ಯದ ಚಿಕಿತ್ಸಾ ಪ್ರಕ್ರಿಯೆಯಲ್ಲಿ, ಅರ್ಥಿಯನ್ನು ಅವನ/ಳ ಪರಿಸರದಿಂದ ಪ್ರತ್ಯೇಕಿಸಿ ಚಿಕಿತ್ಸೆ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಬಹುಪಾಲು ಪ್ರಕರಣಗಳಲ್ಲಿ ಸಮಗ್ರ ಚಿಕಿತ್ಸೆ ಒದಗಿಸಲು ಅರ್ಥಿಯ ನಂತರದ ಪರಿಸರದಲ್ಲಿ ವ್ಯಕ್ತಿಗತ ಸಮಾಜ ಕಾರ್ಯಕರ್ತರಿಗೆ ಅರ್ಥಿಯ ಕುಟುಂಬ, ಅವನು/ಳು ಕಾರ್ಯ ನಿರ್ವಹಿಸುವ ಸ್ಥಳ ಹಾಗೂ ಸಹಪಾಠಿಗಳು ಅರ್ಥಿಯ ನಂತರದ ಪರಿಸರದಲ್ಲಿ ಸಂಪರ್ಕಕ್ಕೆ ಸಿಗುವರು. ಅರ್ಥಿ ಎದುರಿಸುತ್ತಿರುವ ಸಮಸ್ಯೆ ಹಾಗೂ ಸಮಸ್ಯೆಯಿಂದಾಗಿ

ಅವನ/ಳ ಕುಟುಂಬ, ಕಾರ್ಯಸ್ಥಳ ಮತ್ತು ಸಹಪಾಠಿಗಳ ಮೇಲೆ ಬೀರಿರುವ ಪರಿಣಾಮಗಳನ್ನು ಕೂಲಂಕುಷವಾಗಿ ತಿಳಿಯಲು ಸಮಾಜಕಾರ್ಯಕರ್ತರು ಗೃಹಭೇಟಿಯನ್ನು ಕೈಗೊಳ್ಳುವರು.

ಗೃಹಭೇಟಿ ಸಮಾಜಕಾರ್ಯದ ತಂತ್ರಗಳಲ್ಲೊಂದಾಗಿದ್ದು, ಈ ಪ್ರಕ್ರಿಯೆಯಲ್ಲಿ ಸಮಾಜಕಾರ್ಯಕರ್ತರು ಅರ್ಥಿಯ ಕುಟುಂಬಕ್ಕೆ ಭೇಟಿ ನೀಡಿ ಕುಟುಂಬದ ಸದಸ್ಯರೊಂದಿಗೆ ಸಂಭಾಷಣೆ ನಡೆಸುವರು. ಹೀಗೆ ನಡೆಸುವ ಸಂಭಾಷಣೆಯ ಪ್ರಮುಖ ಉದ್ದೇಶವೆಂದರೆ:

- ಅರ್ಥಿ ನೀಡಿದ ಮಾಹಿತಿಯನ್ನು ಪರಿಶೀಲಿಸುವುದು ಮತ್ತು ಹೋಲಿಸಿ ನೋಡುವುದು (ಪ್ರಮುಖವಾಗಿ ಕುಟುಂಬಕ್ಕೆ ಸಂಬಂಧಿಸಿದ ಸಮಸ್ಯೆಗಳಿದ್ದಾಗ).
- ಅರ್ಥಿಯ ಕುಟುಂಬದ ಹಿನ್ನೆಲೆಯಲ್ಲಿ ಅವನ/ಳ ಸಮಸ್ಯೆಯನ್ನು ಅರ್ಥೈಸಿಕೊಳ್ಳುವುದು.
- ಕುಟುಂಬದ ಮೇಲೆ ಅರ್ಥಿಯ ಸಮಸ್ಯೆಯ ಪರಿಣಾಮವನ್ನು ಅರ್ಥೈಸಿಕೊಳ್ಳುವುದು.
- ಪರಿಸರ ಬದಲಾವಣೆಯ ಅನಿವಾರ್ಯತೆ ಇದ್ದಲ್ಲಿ ಸಹಕರಿಸುವುದು.
- ಅರ್ಥಿಯ ಯೋಗಕ್ಷೇಮವನ್ನು ಖಾತರಿಗೊಳಿಸುವುದು (ಉದಾಹರಣೆಗೆ ಕೌಟುಂಬಿಕ ದೌರ್ಜನ್ಯ, ನಿಂದನೆ, ಆಶ್ರಯ ಧಾಮ, ದತ್ತು ಇತ್ಯಾದಿಗಳು ಅವಶ್ಯಕತೆ ಇದ್ದಲ್ಲಿ ಸಹಕರಿಸುವುದು).

## 6.3 ಸಂಪನ್ಮೂಲ ಕ್ರೋಢಿಕರಣ (Resource Mobilization):

ಸಾಮಾನ್ಯವಾಗಿ ಸಂಸ್ಥೆಗಳು ನಿರ್ದಿಷ್ಟಪಡಿಸಿದ ಸೇವೆಗಳನ್ನು ತನ್ನಲ್ಲಿ ಬರುವ ಅರ್ಥಿಗಳಿಗೆ ಒದಗಿಸುತ್ತವೆ. ಅಂತಹ ಸಂದರ್ಭದಲ್ಲಿ ವ್ಯಕ್ತಿಗತ ಸಮಾಜ ಕಾರ್ಯಕರ್ತನು ಸಮಗ್ರ ಚಿಕಿತ್ಸೆಯನ್ನು ಖಾತರಿಗೊಳಿಸಲಾಗುವುದಿಲ್ಲ. ಆದ್ದರಿಂದ ಅರ್ಥಿಗೆ ಸಹಾಯಮಾಡಲು ವ್ಯಕ್ತಿಗತ ಸಮಾಜಕಾರ್ಯಕರ್ತನು ಬೇರೆಡೆಯಿಂದ ಅಗತ್ಯ ಸಂಪನ್ಮೂಲಗಳನ್ನು ತಂದೊದಗಿಸಬೇಕು. ಸಾಹಿತ್ಯಾತ್ಮಕವಾಗಿ ಕ್ರೋಢಿಕರಣವೆಂದರೆ ಸಂಗ್ರಹಿಸು, ಕೂಡಿಸು ಮತ್ತು ಭವಿಷ್ಯದ ಉಪಯೋಗಕ್ಕೆ ಸಿದ್ಧಗೊಳಿಸು ಎಂದರ್ಥ. ಸಮಾಜಕಾರ್ಯ ಪರಿಭಾಷೆಯಲ್ಲಿ ಸಂಪನ್ಮೂಲಗಳ

ಕ್ರೋಢೀಕರಣದ ಅರ್ಥವು ಚಿಕಿತ್ಸಾ ಪ್ರಕ್ರಿಯೆಯಲ್ಲಿ ಅರ್ಥಿಗೆ ಸಹಾಯವಾಗಬಲ್ಲ ಎಲ್ಲ ಸಂಭವನೀಯ ಯೋಜನೆಗಳು, ಸ್ವತ್ತುಗಳು ಮತ್ತು ಸೌಲಭ್ಯಗಳನ್ನು ಸಂಗ್ರಹಿಸುವುದಾಗಿದೆ. ಉದಾಹರಣೆಗೆ ಒಂದು ವೇಳೆ ಅರ್ಥಿ ಅಂಗವಿಕಲನಾಗಿದ್ದು, ಬಡವನಾ/ಳಾಗಿದ್ದ ಪಕ್ಷದಲ್ಲಿ ಸಮಾಜಕಾರ್ಯಕರ್ತರಾದವರು ಅಂಗವಿಕಲರಿಗೆ ಲಭ್ಯವಿರುವ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಸೂಕ್ತ ಮಾಹಿತಿಯನ್ನು ಅರ್ಥಿಗೆ ನೀಡಬೇಕು ಹಾಗೂ ಆ ಯೋಜನೆಗಳ ಸೇವೆಗಳನ್ನು ಅರ್ಥಿಗೆ ಸಿಗುವಂತೆ ಮಾಡಲು ಅರ್ಥಿ ಮತ್ತು ಸರ್ಕಾರದ ನಡುವೆ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಬೇಕು. ಅರ್ಥಿಯ ಸಮಸ್ಯೆಗಳನ್ನು ಪರಿಹರಿಸಲು ಲಭ್ಯವಿರುವ ಆಂತರಿಕ ಮತ್ತು ಬಾಹ್ಯ ಸಂಪನ್ಮೂಲಗಳನ್ನು ತಂದೊದಗಿಸುವ ಕಲೆಯಲ್ಲಿ ಸಮಾಜಕಾರ್ಯಕರ್ತನು ನಿಪುಣನಾಗಿರಬೇಕು.

## 6.4 ಉಲ್ಲೇಖಿತ (Referral):

ಸಮಸ್ಯೆ ಹೊಂದಿರುವ ಅರ್ಥಿಯನ್ನು ಸಮಾಜಕಾರ್ಯಕರ್ತರು ಉತ್ತಮ ಚಿಕಿತ್ಸೆ ದೊರೆಯುವ ಸಂಸ್ಥೆಗೆ ಅಥವಾ ತಜ್ಞ/ನುರಿತ ವ್ಯಕ್ತಿಗತ ಸಮಾಜಕಾರ್ಯಕರ್ತರ ಬಳಿ ಕಳುಹಿಸುವುದನ್ನು ಉಲ್ಲೇಖಿತ ಅಥವಾ ರೆಫರಲ್ ಎಂದು ಕರೆಯಬಹುದು. ವ್ಯಕ್ತಿಗತ ಸಮಾಜಕಾರ್ಯದ ಸಂಪನ್ಮೂಲ ಕ್ರೋಢೀಕರಣ ಹಾಗೂ ಉಲ್ಲೇಖಿತ ತಂತ್ರಗಳು ಜೊತೆಜೊತೆಯಾಗಿ ಜರುಗುತ್ತವೆ. ಒಂದು ವೇಳೆ ವ್ಯಕ್ತಿಗತ ಸಮಾಜಕಾರ್ಯಕರ್ತ ಅಥವಾ ಸಂಸ್ಥೆ ಅರ್ಥಿಯ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲಾಗದ ಪಕ್ಷದಲ್ಲಿ, ವ್ಯಕ್ತಿಗತ ಸಮಾಜಕಾರ್ಯಕರ್ತರು ಅರ್ಥಿಯ ಸಮಸ್ಯೆಗಳು ಪರಿಣಾಮಕಾರಿಯಾಗಿ ಬಗೆಹರಿಸಲ್ಪಡುವ ಅಥವಾ ಅರ್ಥಿಯ ಅಗತ್ಯಗಳಿಗೆ ಅನುಗುಣವಾಗಿ ಸೇವೆ ಒದಗಿಸುವ ಸಂಸ್ಥೆ/ಸಂಘ–ಸಂಸ್ಥೆಗಳಿಗೆ ಅರ್ಥಿಯನ್ನು ಉಲ್ಲೇಖಿಸಬಹುದು.

## 6.5 ಪರಿಸರ ಮಾರ್ಪಡಿಸುವಿಕೆ (Environment Modification):

ವ್ಯಕ್ತಿಗತ ಸಮಾಜಕಾರ್ಯದ ಈ ಪ್ರಕ್ರಿಯೆಯಲ್ಲಿ ಮತ್ತು ನಂತರ ಅರ್ಥಿಯ ಬಗ್ಗೆ ವಿಶೇಷ ಕಾಳಜಿ ಮತ್ತು ರಕ್ಷಣೆಯನ್ನು ಒದಗಿಸಬೇಕು. ಹೀಗೆ ಮಾಡುವುದರಿಂದ ಚೇತರಿಸಿಕೊಳ್ಳುತ್ತಿರುವ ಅರ್ಥಿಯು ಮತ್ತೊಮ್ಮೆ ಸಮಸ್ಯಾತ್ಮಕ ರೂಢಿ ಅಥವಾ ಸಮಸ್ಯಾ ಪರಿಸ್ಥಿತಿಗೆ ಹಿಂದಿರುಗದಂತೆ ತಡೆಯಬಹುದಾಗಿದೆ. ಇದನ್ನು

## ಅನುಬಂಧ-2
## ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳ ಪಠ್ಯಕ್ರಮ

**Bangalore University**
**Department of Studies in Social Work**
**MSW (CBCS) Syllabus - 2014-15**
**Paper Title : SWHCP-1.3, Methods of Working with People**
**(Social Case Work)**
**Semester-I**

**Objectives :**

- Understand casework as a method of social work and appreciate it's place in social work practice.
- Understand the values and principles of working with individuals and families.
- Develop the ability to critically analyze the problems of individuals and families and factors affecting them.
- Understanding of the basic concepts, tools and techniques in working with individuals and families, in problem-solving and in development work.
- Develop appropriate skills and attitudes to work individuals and families.

**UNITE-I: Evolution and Principles of Social Case Work:**

- Meaning, Concept and Definitions of Social Case Work
- Evolution of social case work in the West and in India.

- Introduction to Social Case Work as a method of Social Work.
- Principles : Individualization, Acceptance, Non-judgemental Attitude, Participation, Relationship, Effective Communication of Feeling, Client Self Determination and Confidentiality.

**UNIT-II: Components, Process, Tools and Techniques of Social Case Work:**

- Components: Person, Problem, Place and Process.
- Process: Intake, Study, Assessment (Diagnosis), Treatment (Intervention), Evaluation, Terminatiopn and Follow-up.
- Tools and Techniques of Social Case Work: Interview, Home visit, Observation, Listening, Use of self with awareness, Communication and Rapport Building.
- Recording in Social Case Work: Purpose, Types, Methods and Principles of Recording.

**UNIT-III: Theories and Approaches of Social Case Work:**

- Crisis Theory, Family Intervention Approach, Behavioural Modification Theory, Transactional Analysis Theory, Holistic Approach, Eclectic Theory, Functional; Theory, Problem,-solving Theory, Rational Emotive Theory, Psycho-social Theory and Systems Theory.

**UNIT-IV: Application of Social Case Work in different settings**

- Primary and Secondary Settings - Application of methods in family, women and child welfare settings, marriage counseling centers, schools settings, medical and psychiatric settings, correctional institutions and industry.
- Role of Social Case Worker: Enabler, Facilitator, Social Therapist, Resource Mobilizer and Guide.

# NIRUTA PUBLICATIONS
## ನಿರುತ ಪಬ್ಲಿಕೇಷನ್ಸ್

NIRUTA Publications

**ಲೇಖಕರು ತಮ್ಮ ಪುಸ್ತಕಗಳ ಪ್ರಕಾಶನಕ್ಕಾಗಿ ಸಂಪರ್ಕಿಸಬಹುದು.**
**ಈ ಕೆಳಕಂಡ ಪುಸ್ತಕಗಳು ಪ್ರಸ್ತುತ ನಿರಾತಂಕ ಕಚೇರಿಯಲ್ಲಿ ದೊರೆಯುತ್ತವೆ.**

| ಕ್ರಸಂ | ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|---|
| 1. | ಮಡಿಲಿಗೊಂದು ಮಗು | ಪದ್ಮಸುಬ್ಬಯ್ಯ | 130/- |
| 2. | ಸಮಾಜಕಾರ್ಯ ಮತ್ತು ಸಮುದಾಯ ಅಭಿವೃದ್ಧಿ | ಎನ್.ಬಿ. ಮುನಿರಾಜು | 250/- |
| 3. | ಅರ್ಧನಾರೀಶ್ವರ | ಎಂ. ಬಸವಣ್ಣ | 50/- |
| 4. | ಆತ್ಮೀಯರು | ಪ್ರೊ. ಎಚ್.ಎಂ.ಮರುಳಸಿದ್ಧಯ್ಯ | 200/- |
| 5. | ಪ್ರಶಸ್ತಿ | ಆರ್. ಉಷಾ | 70/- |
| 6 | ಆರೋಗ್ಯವೇ ಭಾಗ್ಯ | ಶಿವಾನಂದಯ್ಯ | 100/- |
| 7. | ಸಮಾಜಕಾರ್ಯದ ಶಬ್ದಕೋಶ | ಪ್ರೊ. ಎಚ್.ಎಂ.ಮರುಳಸಿದ್ಧಯ್ಯ | 75/- |
| 8. | ಡಾ. ಎಚ್.ಎಂ. ಮರುಳಸಿದ್ಧಯ್ಯ (ಜೀವನದ ಕೆಲವು ಸೆಳಕುಗಳು) | ಕೆ. ಭೈರಪ್ಪ | 100/- |
| 9. | ಪರಿವರ್ತನೆ | ಕೆ.ವಿ. ರಾಮ್ | 150/- |
| 10. | ಸಮಾಜಸೇವೆಯ ಮಿನುಗುತಾರೆ ಮೀನಾ | ಕೆ.ವಿ. ರಾಮ್ | 150/- |
| 11. | ವೃತ್ತಿ ಮಾಹಿತಿ ಕೈಪಿಡಿ (ಭಾರತೀಯ ಹಿನ್ನೆಲೆಯಲ್ಲಿ) | ಮೋಹನ್ ದಾಸ್ | 550/- |
| 12. | ಸನ್ಮಾರ್ಗ | ಡಾ. ಸಿ.ಆರ್. ಗೋಪಾಲ್ | 350/- |
| 13. | ಕಾಡುಮಲ್ಲಿಗೆ | ಎಂ.ಎಸ್. ಶ್ರೀವತ್ಸ, ರವಿವರ್ಮ ಸಿ. | 200/- |
| 14. | ಅಮ್ಮೆ ವಾರಾಡ್ | ಡಾ. ಯಶಸ್ವಿನಿ ಬಟ್ಟಂಗಾಯ | 100/- |
| 15. | ಮಾಕುಂಟಿಯ ಮುದುಕರು | ಪ್ರೊ. ಎಚ್.ಎಂ.ಮರುಳಸಿದ್ಧಯ್ಯ | 250/- |
| 16. | ಪೊರಕೆ ಪ್ರೊಫೆಸರ್ | ಡಾ॥ ಮು. ಹಾಲಪ್ಪ | 40/- |
| 17. | ಶಿಕ್ಷಣ ಮತ್ತು ಅಭಿವೃದ್ಧಿ | ಡಾ. ಭಾಗ್ಯಮ್ಮ ಎನ್. | 200/- |
| 18. | ಚಿನ್ಮಯ ಕಥಾ–ಸಂಚಯ | ಎಂ.ಎಂ. ಹಿರೇಮಠ | 80/- |
| 19. | ಸರ್ವರಿಗೂ ಆಯುರ್ವೇದ | ಡಾ. ಟಿ.ಎಂ. ಶಿವಾನಂದಯ್ಯ | 300/- |
| 20. | ಮಹಾತ್ಮಾ ಗಾಂಧೀಜಿಯವರ ತತ್ವಚಿಂತನೆಗಳ ಪ್ರಸ್ತುತತೆ | ಡಾ. ಮೌನೇಶ್ವರ ಶ್ರೀನಿವಾಸರಾವ್ | 100/- |
| 21. | ಶ್ರೀ ಪೆಟ್ಟೆರಾಯ ಸ್ವಾಮಿಯ ಧಾರ್ಮಿಕ ಹಿನ್ನೆಲೆ | ಪ್ರವೀಣ್‌ಕುಮಾರ್ ಎಸ್.<br>ಡಾ. ದೊಡ್ಡಹನುಮಯ್ಯ ಬಿ.ಹೆಚ್. | 100/- |

| | | | |
|---|---|---|---|
| 22. | Indian Street Children | Koduru Venkatesh | 75/- |
| 23. | Social Discrimination Against Persons With Disabilities and Their Rehabilitation in Karnataka | Kannakanti Parameshwar | 550/- |
| 24. | Social Exclusion Inclusion Continuum: A Paradigm Shift | V. Ramakrishna | 600/- |
| 25. | Social Work And Social Welfare | Shankar Pathak | 695/- |
| 26. | Social Work And Social Welfare (subsidized under the NBT) | Shankar Pathak | 245/- |
| 27. | Teen Suicide | Koduru Venkatesh | 150/- |
| 28. | Social Policy, Social Welfare and Social Development | Shankar Pathak | 500/- |
| 29. | Old age in an Indifferent Society | T.K. Nair | 200/- |
| 30. | Community Work : Theories, Experiences and Challenges | Venkat Pulla et,al | 350/- |
| 31. | UGC NET Social Work | Ramesha M.H. et,al | 750/- |
| 32. | Social Work Profession in India: An Uncertain Future | T.K. Nair | 500/- |
| 33. | Ageing in an Indian City | T.K. Nair | 200/- |
| 34. | Corporates & Social Responsibility | K.N. Ajith | 150/- |
| 35. | Karnataka Ngo's Directory | Ramesha M.H. et,al | 750/- |
| 36. | Noam Chomsky's Discourse On Globalization And U.s.' Imperialism: Implications To Social Action In India | Ashok Antony D'Souza | 500/- |
| 37. | A Holistic Approach to Literacy in Indian | Koduru Venkatesh | 75/- |

| | | | |
|---|---|---|---|
| 38. | Scientific Writing and Publishing in Social Work | Ilango Ponnuswami. et,al | 850/- |
| 39. | Technology In Business: A Competitive Edge for Organizations | P.Paramashivaiah. et,al | 600/- |
| 40. | International Conference on Leveraging Operations & IT for Sustainable Development | Om Prakash. C. et,al | 800/- |
| 41. | Emerging Trends in Management | Shiva Shankar. K.C | 750/- |
| 42. | New Vistas and Horizons in Management | Shiva Shankar. K.C. | 750/- |
| 43. | Handbook of Career Information : Indian Context | Mohan Das et,al | 550/- |
| 44. | New Age Banking in India Issues and Challenges | Pallavi S. Kusugal et,al | 650/- |
| 45. | Older People in Rural Tamilnadu | T.K. Nair | 179/- |
| 46. | Contemporary Issues in Venture Capital Financing in India | Dr. C. Vishwanatha Reddy | 475/- |
| 47. | Social Development through Social Work | Ashok Antony D'Souza | 350/- |
| 48. | Challenges in Achieving Food Security in India | Mohan Das et,al. | 350/- |
| 49. | Introducing GST and Its Impact on Indian Economy | Dr. P. Paramashivaiah et,al | 500/- |
| 50. | Business Education and Employability: Challenges and New Directions | P.S. Yadapadithaya et,al. | 950/- |

| | | | |
|---|---|---|---|
| 51. | Indian Womens Empowerment from Harappa Mohenjo Daro Period to Modern Time | K.V. Ram | 150/- |
| 52. | Financial Sector Reforms in India | Dr. G.T. Govindappa et,al. | 800/- |
| 53. | Undergraduate Physics (Volume II) | Mangala Gowri M. et,al. | 190/- |
| 54. | Great Patriotic Indian Women from Early Centuries to the 20th Century | K.V. Ram | 40/- |
| 55. | Smart Cities in India : A Road Ahead | Dr. P. Paramashivaiah et,cl. | 300/- |
| 56. | Vocational Rehabilitation of Disabled in India | Narasimham Rayadurgam | 450/- |
| 57. | Careers in Social Work | Ramesha M.H. et,al. | ***** |
| 58. | NGOs in Karnataka Niratanka Directory (2016) | Ramesha M.H. | ***** |

**Discounts available to Libraries and bulk orders of 20 books or more**

**Niruta books available online : amazon.in**

**NIRUTA PUBLICATIONS**

# 326, 1st Floor, Opp. Syndicate Bank, Near Dr. AIT College,
Kengunte, Mallathahalli, Bengaluru - 560056.
Mob : 9980066890, Off : 080-23213710, 8064521470
Email : nirutapublications@gmail.com
Visit : www.socialworkfootprints.org, www.samajakarya.org

**Mode of Payment**

You can Deposit/Transfer the amount or send DD/Cheque in favour of **Niruta Publications**

| Bank Details : | Address : |
|---|---|
| ***Niruta Publications*** | ***Syndicate Bank*** |
| A/C No: 04621400000215 | Kengeri Satellite Town Branch |
| IFSC Code : SYNB0000462 | Bengaluru-560060 |



ಶ್ರೀಮತಿ ಲಕ್ಷ್ಮಮ್ಮ ಮತ್ತು ಶ್ರೀ ನಾರಾಯಣಸ್ವಾಮಿ ದಂಪತಿಗಳ ಪುತ್ರರಾದ **ಗಂಗಾಧರ ರೆಡ್ಡಿ ಎನ್** MSW., M.Phil ರವರು ಚಿಕ್ಕಬಳ್ಳಾಪುರ ಜಿಲ್ಲೆಯ ಚಲಕಾಯಲಪರ್ತಿ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿದರು. ಸಮಾಜಕಾರ್ಯ ವಿಷಯದಲ್ಲಿ ಸ್ನಾತಕೋತ್ತರ ಹಾಗೂ ಎಂ.ಫಿಲ್ ಪದವಿಗಳನ್ನು ಗಳಿಸಿದ ನಂತರ ಮಕ್ಕಳ ಹಕ್ಕುಗಳ ಸಂರಕ್ಷಣಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕದ ಹಲವು ಸಂಸ್ಥೆ ಮತ್ತು ಜಾಲ (ನೆಟ್‌ವರ್ಕ್) ಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯ ಸಮಾಜಕಾರ್ಯ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಉಸಿರಿಗಾಗಿ ಹಸಿರು ಎಂಬ ಸಂಘಟನೆಯನ್ನು ಹುಟ್ಟುಹಾಕಿ ಪರಿಸರ ಸಂರಕ್ಷಣೆ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸಂಘಟನೆ ಜನ್ಮತಳೆದ ಮೊದಲ ವರ್ಷದಲ್ಲೇ ಯೂಥ್ ಫಾರ್ ಸೇವಾ ಸಂಸ್ಥೆ ನೀಡುವ '**ಯುವಚೇತನ – ಅತ್ಯುತ್ತಮ ಸಂಘಟಿತ ತಂಡ**' ಪುರಸ್ಕಾರವನ್ನು ಮುಡಿಗೇರಿಸಿಕೊಂಡಿದೆ.

ಮಕ್ಕಳ ಶಿಕ್ಷಣ ಹಕ್ಕು, ಬಾಲಕಾರ್ಮಿಕ ಪದ್ಧತಿ, ಬಾಲ್ಯವಿವಾಹ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ವಾರ ಮತ್ತು ಮಾಸ ಪತ್ರಿಕೆಗಳಿಗೆ ಬರೆಯುವುದು ಇವರ ಹವ್ಯಾಸಗಳಲ್ಲೊಂದು. ಮಕ್ಕಳ ಶಿಕ್ಷಣ ಹಕ್ಕಿಗೆ ಸಂಬಂಧಿಸಿದ ಎರಡು ಮಾಹಿತಿ ಕೈಪಿಡಿಗಳನ್ನು ರಚಿಸಿದ್ದು, ಸಮಾಜಕಾರ್ಯ ವಿಷಯಕ್ಕೆ ಸಂಬಂಧಿಸಿದಂತೆ "**ವ್ಯಕ್ತಿಗತ ಸಮಾಜಕಾರ್ಯದ ಪರಿಚಯ**" ಇವರ ಮೊದಲ ಪುಸ್ತಕ. ಪರಿಸರ ಸಂರಕ್ಷಣೆ, ನೀರಾವರಿ ಹಾಗೂ ಕೃಷಿ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ಲೇಖಕರು **ಉಸಿರಿಗಾಗಿ ಹಸಿರು** ಸಂಘಟನೆಯ ಮೂಲಕ ಸದರಿ ಕ್ಷೇತ್ರಗಳಲ್ಲಿ ಸಂಶೋಧನಾ ನಿರತರಾಗಿದ್ದಾರೆ.



ಸಮಾಜಕಾರ್ಯ ಕ್ಷೇತ್ರದಲ್ಲಿ ಅಪೂರ್ವ ಬದ್ಧತೆ ಹೊಂದಿರುವ ಸಾಮಾನ್ಯ ಯುವಕ **ಎಂ.ಎಚ್. ರಮೇಶ**. ಇವರು 2004ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಸಮಾಜಕಾರ್ಯ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಕಳೆದ ಒಂದು ದಶಕದಲ್ಲಿ ಸಮಾಜಕಾರ್ಯ ಕ್ಷೇತ್ರಕ್ಕೆ ಇವರು ನೀಡಿದ ಕೊಡುಗೆ ಅಪಾರ. ಇವರು ಆರಂಭಿಸಿದ "**ನಿರುತ ಪ್ರಕಾಶನ**" ಸಂಸ್ಥೆ ಸಮಾಜಕಾರ್ಯ ಸಾಹಿತ್ಯ ಕ್ಷೇತ್ರದಲ್ಲಿ ಮೈಲಿಗಲ್ಲನ್ನು ಸೃಷ್ಟಿಸಿದೆ. ಕಳೆದ ದಶಕದಲ್ಲಿ ಸಮಾಜಕಾರ್ಯ ವಿಷಯಕ್ಕೆ ಸಂಬಂಧಿಸಿದ ಸುಮಾರು 75ಕ್ಕೂ ಅಧಿಕ ಪುಸ್ತಕಗಳನ್ನು ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ಪ್ರಕಟಿಸಿದ ಭಾರತದ ಏಕೈಕ ಪ್ರಕಾಶನಾಲಯ ಎಂದರೆ ಅತಿಶಯೋಕ್ತಿಯಾಗದು. ಇವರು 2007ರಲ್ಲಿ "**ನಿರಾತಂಕ**" ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ. ಸಮಾಜಕಾರ್ಯವನ್ನು ಪ್ರಾಯೋಗಿಕವಾಗಿ ಆಚರಿಸುತ್ತಿದ್ದಾರೆ. ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಹೊರಬರುತ್ತಿರುವ "**ಸಮಾಜಕಾರ್ಯದ ಹೆಜ್ಜೆಗಳು**" ಎಂಬ ತ್ರೈಮಾಸಿಕ ಪತ್ರಿಕೆ ಇವರ ಕನಸಿನ ಕೂಸು.

**ISBN : 978-93-84262-39-6**

**ಬೆಲೆ : 175-00**

NIRUTA Publications

# ನಿರುತ ಪಬ್ಲಿಕೇಷನ್ಸ್

ನಿರಾತಂಕ, 326, 1ನೇ ಮಹಡಿ, ಸಿಂಡಿಕೇಟ್ ಬ್ಯಾಂಕ್ ಎದುರು,
ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಬೆಂಗಳೂರು-560056
ಮೊ : 9980066890, ದೂ : 080-23213710
**Email : nirutapublications@gmail.com**
**Visit : www.socialworkfootprints.org**
**www.samajakarya.org**